ವಿಜಯಪುರ | ಸಂಪುಟ 04 | ಸಂಚಿಕೆ 222 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ಅಕ್ಟೋಬರ್ 28, 2026

"ರಾಜ್ಯ ರಾಜಕೀಯದಲ್ಲಿ 'ಸ್ಟಿಂಗ್ ಆಪರೇಷನ್' ಭಾರೀ ಸದ್ದು ಮಾಡುತ್ತಿದ್ದು, ಎಲ್ಲಾ ಕಡೆ'ಸ್ಟಿಂಗ್ ಫ್ಯಾಕ್ಟರಿಗಳೇ' ಓಪನ್ ಆಗಿವೆ ಮತ್ತು ಇಂತಹ ಕಾರ್ಯಾಚರಣೆ ಸಾಮಾನ್ಯ ಸಂಗತಿಯಾಗಿಬಿಟ್ಟಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ನಡೆದಿದೆ ಎನ್ನಲಾದ 'ಸ್ಟಿಂಗ್ ಆಪರೇಷನ್' ರಾಜ್ಯದ ಜನರಿಗೆ ಮಾಡಿದ ಅವಮಾನ."



■ ಕೆ.ಎನ್. ರಾಜಣ್ಣ
ಮಾಜಿ ಸಚಿವರು

ದೇವರಹಿಪ್ಪರಗಿಯಲ್ಲಿ ಸತತ ಐದು ದಿನಗಳಿಂದ ನಡೆದ ಅದ್ದೂರಿ । ನಾಡಿನ ಮೂಲೆಗಳಿಂದ ಬಂದ ಸಹಸ್ರಾರು ಭಕ್ತರು

## ರಾವುತರಾಯ-ಮಲ್ಲಯ್ಯನ ಅದ್ದೂರಿ ಜಾತ್ರೆ ಸಂಪನ್ನ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಸತತ ಐದು ದಿನಗಳಿಂದ ನಡೆದ ರಾವುತರಾಯ-ಮಲ್ಲಯ್ಯನ ಅದ್ದೂರಿ ಜಾತ್ರೆ ನಾಡಿನ ಮೂಲೆಗಳಿಂದ ಬಂದ ಸಹಸ್ರಾರು ಭಕ್ತರ ಮದ್ಯೆ ಮಂಗಳವಾರ ಸಂಪನ್ನವಾಯಿತು.

ಪಟ್ಟಣದ ಹೊರವಲಯದಲ್ಲಿರುವ ಮಲ್ಲಯ್ಯನ ದೇವಸ್ಥಾನಕ್ಕೆ ಕಳೆದ ಶುಕ್ರವಾರದಂದು ತೆರಳಿದ್ದ ರಾವುತರಾಯನನ್ನು ತೆರೆದ ಬಂಡಿಯಲ್ಲಿ ಸಹಸ್ರಾರು ಭಕ್ತಾಧಿಗಳ ಜಯಘೋಷದ ಮದ್ಯೆ ಮೂಲ ದೇವಸ್ಥಾನಕ್ಕೆ ಕರೆ ತರಲಾಯಿತು. ನಾಡಿನ ಹಾಗು ಮಹಾರಾಷ್ಟ, ಆಂಧ್ರ, ಗೋವಾ ರಾಜ್ಯಗಳಿಂದ ಆಗಮಿಸಿದ ಭಕ್ತ ಸಮೂಹ ವಾಸ್ತವ್ಯ ಹೂಡಿ ವಿವಿಧ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪುನೀತರಾದರು.

ಬೆಳಿಗ್ಗೆ 07.00 ಗಂಟೆಗೆ ಪ್ರಾರಂಭವಾದ ಭವ್ಯ ಬಂಡಿ ಮೆರವಣಿಗೆಯಲ್ಲಿ ವಿರಾಜಮಾನನಾಗಿ ಕಂಗೊಳಿಸಿದ ರಾವುತರಾಯನನ್ನು ಭಕ್ತಾಧಿಗಳು ಭಕ್ತಿಯೊಂದಿಗೆ ಭಂಡಾರ ಎಸೆದು 'ಏಳುಕೋಟಿ-ಏಳುಕೋಟಿ ಗೇ' ಎಂಬ ಜಯಕಾರದೊಂದಿಗೆ ಭಕ್ತಿ ಸಮರ್ಪಿಸಿದರು.

### ಉಚಿತ ಅನ್ನಪ್ರಸಾದ

ಪಟ್ಟಣದ ಹಲವಾರು ಯುವಕ ಸಂಘಗಳು ವ್ಯಾಪಾರಸ್ತರು, ಸ್ವಯಂಪ್ರೇರಣೆಯಿಂದ ದೇವಾಲಯ ಹಾಗೂ ರಾಷ್ಟೀಯ ಹೆದ್ದಾರಿಯ ಹತ್ತಿರ ಉಚಿತ ಅನ್ನಪ್ರಸಾದ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಜಾತ್ರೆಯುದ್ದಕ್ಕೂ ಪೊಲೀಸ್ ಸಿಬ್ಬಂದಿ ಸೂಕ್ತ ಬಂದೋಬಸ್ತ ವಹಿಸಿದ್ದರಿಂದ ಯಾವುದೆ ಅಹಿತಕರ ಘಟನೆಗಳು ನಡೆಯದೆ ಶಾಂತಿಯಿಂದ ಮುಕ್ತಾಯಗೊಂಡ ಜಾತ್ರೆ ಜನಸಮೂಹದ ತುಂಬು ಪ್ರಶಂಸೆಗೆ ಪಾತ್ರವಾಯಿತು.

ಜಾತ್ರೆಯಲ್ಲಿ ಪಟ್ಟಣದ ಜನರು ಐದು ದಿನಗಳ ವರೆಗೆ ತಮ್ಮ ಕೆಲಸ ಕರ್ಯಗಳನ್ನು ಬದಿಗೊತ್ತಿ, ಪ್ರತಿದಿನ ಪೂಜಾ ಕರ್ಯ ಸಾಂಸ್ಕೃತಿಕ ಕರ್ಯಕ್ರಮದಲ್ಲಿ ಪಾಲ್ಗೊಂಡು ಜಾತ್ರೋತ್ಸವಕ್ಕೆ ಮೆರಗು ತಂದರು.

ಜಾತ್ರೆಯ ಅಂಗವಾಗಿ ಗೆಳೆಯರ ಬಳಗದಿಂದ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ, ಸಂಗ್ರಾಣಿ ಕಲ್ಲು ಹಾಗೂ ಭಾರ ಎತ್ತುವ ಸ್ಪರ್ಧೆಗಳು,



ರಸಮಂಜರಿ ಕಾರ್ಯಕ್ರಮಗಳು ಜರುಗಿದವು.

ಆದರೆ ಕಳೆದ 20-30 ವರ್ಷಗಳ ಹಿಂದೆ ಕೇವಲ ಪ್ರಸಾದ ರೂಪದಲ್ಲಿ ಹಣೆಗೆ ಮಾತ್ರ ಧರಿಸುತ್ತಿದ್ದ ಭಂಡಾರ ಇಂದು ಎಲ್ಲೆಂದರಲ್ಲಿ ಎರಚುವ ಬಣ್ಣವಾಗಿ ಜಾತ್ರೆಗೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಿದ್ದು ಸುಶಿಕ್ಷಿತರು ಜಾತ್ರೆಯನ್ನೂ ದೂರದಿಂದ ಕಾಣುವಂತಾಯಿತು. ಈ ಕುರಿತು ಆಡಳಿತ ಮಂಡಳಿ ಮುಂದಿನ ದಿನಗಳಲ್ಲಿ ಅಗತ್ಯ ಕ್ರಮ ವಹಿಸಬೇಕು ಎಂಬ ಮಾತುಗಳು ದೂರದ ನಗರ ಪಟ್ಟಣಗಳಿಂದ ಬಂದ ಭಕ್ತರಿಂದ ಕೇಳಿ ಬಂದವು.

ವಿಧಾನ ಪರಿಷತ್ತಿನ 2 ಪದವೀಧರ, 2 ಶಿಕ್ಷಕರ ಕ್ಷೇತ್ರ ಸೇರಿ ಒಟ್ಟು 4 ಕ್ಷೇತ್ರಗಳ ಚುನಾವಣೆ। ಬ್ಯಾಲೆಟ್ ಪೇಪರ್ ಮೂಲಕ ನಡೆದ ಚುನಾವಣೆ। ಕಾಂಗ್ರೆಸ್ ಗೆ ಮುಖಭಂಗ।

## ಎಂಎಲ್ಸಿ ಚುನಾವಣೆಯಲ್ಲಿ 4 ಸ್ಥಾನ ಎನ್ ಡಿ ಎ ತೆಕ್ಕೆಗೆ!



ಬೆಂಗಳೂರು: ವಿಧಾನ ಪರಿಷತ್ತಿನ 2 ಪದವೀಧರ, 2 ಶಿಕ್ಷಕರ ಕ್ಷೇತ್ರ ಸೇರಿ ಒಟ್ಟು 4 ಕ್ಷೇತ್ರಗಳ ಚುನಾವಣೆ ಫಲಿತಾಂಶ ಪ್ರಕಟವಾಗಿದೆ. ನಾಲ್ಕು ಕ್ಷೇತ್ರಗಳಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಎನ್.ಡಿ.ಎ ನಾಲ್ಕು ಸ್ಥಾನಗಳಲ್ಲಿಯೂ ಗೆಲುವು ಸಾಧಿಸಿದ್ದು ಕಾಂಗ್ರೆಸ್ ಶೂನ್ಯ ಸುತ್ತಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರ:

ಬಿಜೆಪಿ ಜೆಡಿಎಸ್ ಮೈತ್ರಿ (ಓಆಂ) ಅಭ್ಯರ್ಥಿ ಎ.ಪಿ ರಂಗನಾಥ್ 908 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಐದು ಬಾರಿ ಗೆಲುವು ಸಾಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಸೋಲು ಕಂಡಿದ್ದಾರೆ. ಇನ್ನು ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಗೆಲುವು ಸಾಧಿಸಿದ್ದಾರೆ. ಮೊದಲ ಸುತ್ತಿನಲ್ಲಿ 7239, ಎರಡನೇ ಸುತ್ತಿನಲ್ಲಿ 7311 ಸೇರಿ 14,540 ಮತಗಳನ್ನು ಪಡೆದಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮತ್ತೂರ್ ಸೋಲು ಕಂಡಿದ್ದಾರೆ.

ಪಶ್ಚಿಮ ಪದವೀಧರರ ಕ್ಷೇತ್ರ, ಆಗ್ನೇಯ ಪದವೀಧರರ ಕ್ಷೇತ್ರ: ಓಆಂ ಅಭ್ಯರ್ಥಿಗಳು ಮುನ್ನಡೆ

ಪಶ್ಚಿಮ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ-2026ರ ಮತ ಎಣಿಕೆ ಕಾರ್ಯವು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುತ್ತಿದೆ. ಮೊದಲ ಸುತ್ತಿನ ಮತ ಎಣಿಕೆಯಲ್ಲಿ ಒಟ್ಟು 14,001 ಮತಗಳಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಸಂಕನೂರ 6459 ಮತಗಳು ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಅವರು 4394 ಮತಗಳನ್ನು ಪಡೆದುಕೊಂಡಿರುತ್ತಾರೆ. ಮೊದಲ ಸುತ್ತಿನ ಮತ ಎಣಿಕೆಯಲ್ಲಿ ಸಂಕನೂರ ಎಸ್.ವಿ ಅವರು 2206 ಮತಗಳ ಅಂತರದಿಂದ ಮುನ್ನಡೆ ಸಾಧಿಸಿದ್ದಾರೆ. ಇನ್ನು ಆಗ್ನೇಯ ಪದವೀಧರರ ಕ್ಷೇತ್ರದಲ್ಲೂ ಬಿಜೆಪಿಯ ಅಭ್ಯರ್ಥಿ ಕೆ.ಎಂ. ಸುರೇಶ್ ಮುನ್ನಡೆ ಸಾಧಿಸಿದ್ದು ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆಮಠ ಹಿನ್ನಡೆಯಲ್ಲಿದ್ದಾರೆ.

ಪಶ್ಚಿಮ ಪದವೀಧರರ ಕ್ಷೇತ್ರದ ಎಣಿಕೆ ಧಾರವಾಡದಲ್ಲಿ, ಈಶಾನ್ಯ ಶಿಕ್ಷಕರ ಕ್ಷೇತ್ರದ ಎಣಿಕೆ ಕಲಬುರಗಿಯಲ್ಲಿ, ಬೆಂಗಳೂರು ಶಿಕ್ಷಕರ ಕ್ಷೇತ್ರ ಮತ್ತು ಆಗ್ನೇಯ ಪದವೀಧರರ ಕ್ಷೇತ್ರದ ಮತ ಎಣಿಕೆ ಬೆಂಗಳೂರಲ್ಲಿ ನಡೆಯಿತು.

## ಕಲಾಪ್ರತಿಭೋತ್ಸವ: ನ.5ವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳ ಹಾಗೂ ಯುವಜನರಲ್ಲಿನ ಕಲಾಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿರುವ ಕಲಾಪ್ರತಿಭೋತ್ಸವದಲ್ಲಿ ಭಾಗವಹಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಬಾಲಪ್ರತಿಭೆ, ಕಿಶೋರ ಪ್ರತಿಭೆ ಹಾಗೂ ಯುವಪ್ರತಿಭೆ ವಿಭಾಗಗಳಲ್ಲಿ ಭಾಗವಹಿಸಲು ಅಗತ್ಯ ದಾಖಲೆಗಳೊಂದಿಗೆ ನ.5ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ಇಲ್ಲಿಗೆ ಖುದ್ದಾಗಿ ಸಲ್ಲಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಕಾಂಗ್ರೆಸ್ ನಾಯಕರಿಗೆ ಖಿನ್ನತೆ ಆವರಿಸಿದೆ :ಜಿಗಜಿಣಗಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪ್ರಧಾನಿ ನರೇಂದ್ರ ಮೋದಿ ಅವರ ತಂದೆ ಕುರಿತು ಅವಹೇಳನ ಮಾಡುವುದು, ಸಂವಿಧಾನದ ಪ್ರತಿ ಹಿಡಿದು ರಸ್ತೆ ಮೇಲೆಲ್ಲ ಉರುಳಾಡುವುದು, ಸ್ವಂತ ಪಕ್ಷವಿದ್ದರೂ ಸಿಜೆಪಿಯಂಥ ಅನಧಿಕೃತ ಪಕ್ಷಕ್ಕೆ ಬೆಂಬಲ ನೀಡುವುದು, ಅರಾಜಕತೆ ಸೃಷ್ಟಿಸುವ ಪ್ರಯತ್ನದಲ್ಲಿ ತೊಡಗಿರುವುದನ್ನು ಗಮನಿಸಿದರೆ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರಲ್ಲಿ ಖಿನ್ನತೆಯ ಆವ-ರಿಸಿರುವ ಸಾಧ್ಯತೆ ಕಂಡು ಬರುತ್ತಿದೆ. ಹೀಗಾಗಿ ಕೂಡಲೇ ಚಿಕಿತ್ಸೆ ನೀಡುವುದು ಅಗತ್ಯ' ಎಂದು ಸಂಸದ ರಮೇಶ ಜಿಗಜಿಣಗಿ ತಿಳಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಈ ದೇಶ ಕಂಡ ಅಪ್ರತಿಮ ನಾಯಕ. ಪ್ರಪಂಚವೇ ಇಂದು ಅವರನ್ನು ವಿಶ್ವ ಗುರು ಎಂದು ಸಂಬೋಧಿಸುತ್ತಿವೆ. ಅವರನ್ನು ಸೈದ್ಧಾಂತಿ-ಕವಾಗಿ ಎದುರಿಸಲಾಗದ ಕಾಂಗ್ರೆಸ್ ನಾಯಕರು ವೈಯಕ್ತಿಕ ತೇಜೋವಧೆ ನಡೆಸಿದ್ದಾರೆ. ಈ ಹಿಂದೆ ಅವರ ತಾಯಿ ಅವರ ಕುರಿತು ಹೀಗಳೆದಿದ್ದರು. ಇದೀಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಹಾರದ ಕಾರ್ಯಕ್ರಮವೊಂದರದಲ್ಲಿ ಭಾಷಣ ಮಾಡುತ್ತಾ 'ಮೋದಿ ಅವರ ಅಪ್ಪನೂ ಹೋಗಬೇಕಾಗುತ್ತದೆ' ಎಂಬ ಪದ ಬಳಸಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ ಯಾಗಿದೆ' ಎಂದಿದ್ದಾರೆ.

'ಸತತ ಸೋಲುಗಳಿಂದಾಗಿ ಮಾನಸಿಕವಾಗಿ ಕುಗ್ಗಿರುವ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ವರ್ತನೆ ಗಮನಿಸಿದರೆ ಖಿನ್ನತೆಯ ಲಕ್ಷಣಗಳು ಕಂಡು ಬರುತ್ತಿವೆ. ಅವರು ಮಾನಸಿಕ ಸ್ಥಿತಿಮಿತತೆ ಕಳೆದುಕೊಂಡಂತೆ ಕಾಣುತ್ತಿದೆ. ಇತ್ತೀಚೆಗಂತೂ ಚಿತ್ರ ವಿಚಿತ್ರವಾಗಿ ವರ್ತಿಸುತ್ತಿದ್ದಾರೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕೆಂಬ ಭ್ರಮೆಯಲ್ಲಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಮೋದಿ ಅವರನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಲಾಗುತ್ತಿದೆ. ಆದರೆ, ಪ್ರಧಾನಿ ಮೋದಿ ಅವರು ಇಂಥ ಆರೋಪಗಳಿಗೆ ಕುಗ್ಗುವ-ಜಗ್ಗುವ ವ್ಯಕ್ತಿ ಅಲ್ಲ' ಎಂದಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಸಹ ತಮ್ಮತನ ಕಳೆದುಕೊಳ್ಳುತ್ತಿದ್ದಾರೆ ಎಂಬುದಕ್ಕೆ ಮೋದಿ ಅವರ ತಂದೆಯ ಕುರಿತಾದ ಅವಹೇಳನವೇ ಸಾಕ್ಷಿ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭತಗುಣಕಿಯಲ್ಲಿ ಕರ್ನಾಟಕಮಹಾರಾಷ್ಟದ ಪೈಲ್ವಾನರಿಂದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿ

## ಕುಸ್ತಿ ದೈಹಿಕ, ಬೌದ್ಧಿಕ ಸಾಮರ್ಥ್ಯ ವೃದ್ಧಿಸುವ ಕ್ರೀಡೆ :ಮಿಸಾಳೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಕುಸ್ತಿ ನಮ್ಮ ದೇಶದ ಸಾಂಪ್ರದಾಯಿಕ ಕ್ರೀಡೆಯಾಗಿದ್ದು, ಆರೋಗ್ಯ ಕಾಪಾಡಿಕೊಳ್ಳಲು ಔಷಧಿಯಿದ್ದಂತೆ. ಇಂತಹ ಕ್ರೀಡೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದ-ರಿಂದ ದೈಹಿಕ ಸಾಮರ್ಥ್ಯ ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಜೈಭವಾನಿ ಜಾತ್ರಾ ಕಮಿಟಿಯ ಕುಸ್ತಿ ಅಧ್ಯಕ್ಷ ಶಹಾಜಿ ಮಿಸಾಳೆ ಅಭಿಪ್ರಾಯಪಟ್ಟರು.

ಇಂಡಿ ತಾಲ್ಲೂಕಿನ ಭತಗುಣಕಿ ಗ್ರಾಮದಲ್ಲಿ ಜೈಭವಾನಿ ಜಾತ್ರಾ ಮಹೋತ್ಸವದ ನಿಮಿತ್ತ ಜೈಭವಾನಿ ಜಾತ್ರಾ ಕಮಿಟಿ ಅಧ್ಯಕ್ಷ ರುಕ್ಮುದ್ದಿನ್ ತದ್ದೇವಾಡಿ ಹಾಗೂ ಕುಸ್ತಿ ಅಧ್ಯಕ್ಷ ಶಹಾಜಿ ಮಿಸಾಳೆ ಅವರ ಸಹಯೋಗದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟದ ಸುಪ್ರಸಿದ್ಧ ಪೈಲ್ವಾನರಿಂದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಶಹಾಜಿ ಮಿಸಾಳೆ, ಕುಸ್ತಿ ಕೇವಲ ಮನರಂಜನೆಯ ಕ್ರೀಡೆಯಲ್ಲ. ಅದು ಶಿಸ್ತು, ಸಂಯಮ, ದೈಹಿಕ ಬಲ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ಕ್ರೀಡೆಯಾಗಿದೆ. ಯುವಕರು ಇಂತಹ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಆರೋಗ್ಯವಂತ ಜೀವನ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷ ರಾಘವೇಂದ್ರ ಕಾಪಸೆ ಮಾತನಾಡಿ, ಕುಸ್ತಿ ಅಭ್ಯಾಸ ಮಾಡುವುದು ಸುಲಭದ ಮಾತಲ್ಲ. ವರ್ಷಾನುಗಟ್ಟಲೆ ಕಠಿಣ ಪರಿಶ್ರಮ ಪಟ್ಟು, ದೇಹದ ಸಮತೋಲನ ಕಾಪಾಡಿಕೊಂಡು, ನಿರಂತರ ಅಭ್ಯಾಸದ ಮೂಲಕ ದೇಹವನ್ನು ಸದೃಢಗೊಳಿಸಿದಾಗ ಮಾತ್ರ ಒಬ್ಬ ಸಮರ್ಥ ಪೈಲ್ವಾನನಾಗಲು ಸಾಧ್ಯ ಎಂದರು.

ಇಂದಿನ ಯುವಜನರು ಮೊಬೈಲ್ ಬಳಕೆ, ಗುಟ್ಕಾ ಹಾಗೂ ಇತರ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಆರೋಗ್ಯದ ಮಹತ್ವವನ್ನು ಮರೆತು ದೇಹವನ್ನು ಹಾಳುಮಾಡಿಕೊಳ್ಳುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಯುವಕರನ್ನು ಇಂತಹ ದುಶ್ಚಟಗಳಿಂದ ದೂರವಿಟ್ಟು ಸಾಂಪ್ರದಾಯಿಕ ಕ್ರೀಡೆಗಳತ್ತ ಆಕರ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಇಲ್ಲವಾದರೆ ಮುಂದಿನ ಪೀಳಿಗೆಗೆ ಕುಸ್ತಿ ಎಂದರೇನು ಎಂಬುದನ್ನು ತಿಳಿಸಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಎಚ್ಚರಿಸಿದರು.

ಪ್ರತಿ ಗ್ರಾಮದಲ್ಲಿಯೂ ಗರಡಿ ಮನೆಗಳನ್ನು ನಿರ್ಮಿಸಿ, ಯುವಕರಿಗೆ ಕುಸ್ತಿ ಅಭ್ಯಾಸ ಮಾಡಲು ಅಗತ್ಯ ಸೌಲಭ್ಯ ಕಲ್ಪಿಸಿದರೆ ಈ ಸಾಂಪ್ರದಾಯಿಕ ಕ್ರೀಡೆಯನ್ನು ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿ.ಎಂ. ಕೋರೆ, ಜೆಟ್ಟೆಪ್ಪ ರವಳಿ, ರಣಜಿತ ಬಾಬರ, ಭರತ ಬಾಬರ, ಶಿವಪತ್ರ ಜೇವೂರಗಿ, ಲಕ್ಷ್ಮೀಕಾಂತ ಮೇತ್ರಿ, ಭೀಮಣ್ಣ ಕವಲಿ, ಸತೀಶ ಹತ್ತಿ, ಅಪ್ಪಾಸಾಹೇಬ ಹಾವಿನಾಳ, ಸುರೇಶ ಬಾಬರ, ವಿಜು ಶಿಂಧೆ, ಅಶೋಕ ಜಾಧವ, ಶಿವಾಜಿ ಶಿಂಧೆ, ಸುರೇಶ ಮುಜಗೊಂಡ, ಕೃಷ್ಣಾ ಕರಾಡೆ, ಧನಾಜಿ ಮಸ್ಕೆ, ಬಸವರಾಜ ಶೆಡಬಾಳ ಸೇ-ರಿದಂತೆ ಜಾತ್ರಾ ಕಮಿಟಿಯ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿಜಯಪುರ ಪೊಲೀಸರ ಭರ್ಜರಿ ಕಾರ್ಯಾಚರಣೆ । ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ ಮಾಹಿತಿ

# ರೂ.1.07 ಕೋಟಿ ಮೌಲ್ಯದ 537 ಮೊಬೈಲ್‌ಗಳ ಪತ್ತೆ!

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸಾರ್ವಜನಿಕರು ಕಳೆದುಕೊಂಡ ಅಥವಾ ಕಳ್ಳತನವಾದ ಮೊಬೈಲ್‌ಗಳನ್ನು ಪತ್ತೆಹಚ್ಚಲು ವಿಜಯಪುರ ಜಿಲ್ಲಾ ಪೊಲೀಸ್ ಇಲಾಖೆ ಕೈಗೊಂಡಿರುವ ಕಾರ್ಯಾಚರಣೆಯಲ್ಲಿ ಒಟ್ಟು 1.07 ಕೋಟಿ ಮೌಲ್ಯದ 537 ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದೆ. ಪತ್ತೆಯಾದ ಮೊಬೈಲ್‌ಗಳನ್ನು ಸಂಬಂಧಪಟ್ಟ ಸಾರ್ವಜನಿಕರಿಗೆ ಮರಳಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರಣೆ ನೀಡಿದ ಅವರು, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್ ಸಾರ್ವಜನಿಕರ ದೈನಂದಿನ ಜೀವನದಲ್ಲಿ ಅತ್ಯಂತ ಅಗತ್ಯ ಸಾಧನ, ಮೊಬೈಲ್ ಕಳೆದುಹೋದ ಅಥವಾ ಕಳ್ಳತನವಾದ ಕುರಿತು ಸಾರ್ವಜನಿಕರಿಂದ ಪ್ರತಿದಿನ ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗುತ್ತಿವೆ. ಈ ದೂರುಗಳ ಆಧಾರದ ಮೇಲೆ ಪೊಲೀಸ್ ಇಲಾಖೆ ಸಿಇಐಆರ್ ಪೋರ್ಟಲ್ ಬಳಸಿಕೊಂಡು ಮೊಬೈಲ್‌ಗಳ ಪತ್ತೆಗೆ ಕ್ರಮ ಕೈಗೊಳ್ಳುತ್ತಿದೆ.

ಸೆಂಟ್ರಲ್ ಎಕ್ಯೂಪಮೆಂಟ್ ಐಡೆಂಟಿಟಿ ರಿಜಿಸ್ಟರ್‌ಭಾರತಸರ್ಕಾರದದೂರಸಂಪರ್ಕಇಲಾಖೆಯು ರೂಪಿಸಿರುವ ಡಿಜಿಟಲ್ ವ್ಯವಸ್ಥೆಯಾಗಿದ್ದು, ಮೊಬೈಲ್



ಫೋನ್ ಕಳೆದುಹೋದಾಗ ಅಥವಾ ಕಳ್ಳತನವಾದಾಗ ಅದರ ಐಎಂಇಐ ಸಂಖ್ಯೆಯ ಸಹಾಯದಿಂದ ಸಾಧನವನ್ನು ಪತ್ತೆಹಚ್ಚಲು, ಬ್ಲಾಕ್ ಮಾಡಲು ಹಾಗೂ ಮರಳಿ ಪಡೆಯಲು ಈ ವ್ಯವಸ್ಥೆ ನೆರವಾಗುತ್ತದೆ ಎಂದರು.

ಈ ಪೋರ್ಟಲ್ ಮೂಲಕ ಕಳೆದುಹೋದ ಅಥವಾ ಕಳ್ಳತನವಾದ ಮೊಬೈಲ್‌ಗಳ ದುರುಪಯೋಗವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಮೊಬೈಲ್ ಕಳೆದುಕೊಂಡವರು ನೀಡುವ ದೂರುಗಳ ಆಧಾರದ ಮೇಲೆ ಪೊಲೀಸರು ಪತ್ತೆ ಕಾರ್ಯ ಕೈಗೊಳ್ಳುತ್ತಾರೆ.

ಡಿ.ವೈ.ಎಸ್.ಪಿ. ಗಳಾದ ನಾಗರಾಜ್, ಚಂದ್ರಕಾಂತ ನಂದರೆಡ್ಡಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಎಲ್ಲ 28 ಪೊಲೀಸ್ ಠಾಣೆಗಳಲ್ಲೂ ಕಾರ್ಯಾಚರಣೆ



ವಿಜಯಪುರ ಜಿಲ್ಲೆಯ ಎಲ್ಲ 28 ಪೊಲೀಸ್ ಠಾಣೆಗಳಲ್ಲಿ ಈ ಪೋರ್ಟಲ್ ಅನ್ನು ಪರಿಣಾಮಕಾ-ರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಸಾರ್ವಜನಿಕರಿಂದ ದಾಖಲಾಗುವ ಮೊಬೈಲ್ ಕಳೆದುಹೋದ ಹಾಗೂ ಕಳ್ಳತನವಾದ ಪ್ರಕರಣಗಳನ್ನು ಪರಿಶೀಲಿಸಿ, ನಿಯಮಿತವಾಗಿ ಪತ್ತೆ ಕಾರ್ಯ ನಡೆಸಲಾಗುತ್ತಿದೆ. ಈವರೆಗೆ ಒಟ್ಟು 537 ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದ್ದು, ಅವುಗಳ ಅಂದಾಜು ಮೌಲ್ಯ 1,07,40,000 ಆಗಿದೆ ಎಂದು ನಿಂಬರಗಿ ವಿವರಿಸಿದರು.

ಮೊಬೈಲ್ ಪತ್ತೆ ಕಾರ್ಯ ನಿರಂತರವಾಗಿ ನಡೆಯುತ್ತಿದ್ದು, ಸಾರ್ವಜನಿಕರು ತಮ್ಮ ಮೊಬೈಲ್ ಕಳೆದುಹೋದರೆ ಅಥವಾ ಕಳ್ಳತನವಾದರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಸಿಇಐಆರ್ ಪೋರ್ಟಲ್‌ನ ಸೌಲಭ್ಯವನ್ನು ಬಳಸಿಕೊಳ್ಳಬೇಕು ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಮನವಿ ಮಾಡಿಕೊಂಡರು.

# ರಾಜಕಾರಣಿಗಳ ನಡೆ-ನುಡಿ ಸಮಾಜಕ್ಕೆ ಮಾರಕವಾಗದಿರಲಿ

■ ಉದಯರಶ್ಮಿ ದಿನಪತ್ರಿಕೆ

ಅಭಿಮತ

ಸಂತೋಷ ಬಗಲಿ.
ಸಾಮಾಜಿಕ ಚಿಂತಕರು
ವಿಜಯಪುರ

ರಾಜಕೀಯವೆಂಬುದು ಕೇವಲ ಅಧಿಕಾರ ಪಡೆಯುವ ವೇದಿಕೆಯಲ್ಲ; ಅದು ಸಮಾಜವನ್ನು ಮುನ್ನಡೆಸುವ, ಜನರಿಗೆ ದಾರಿ ತೋರಿಸುವ ಹಾಗೂ ಮುಂದಿನ ಪೀಳಿಗೆಯ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯುತ ಕ್ಷೇತ್ರವಾಗಿದೆ.



ರಾಜಕೀಯ ಕ್ಷೇತ್ರದಲ್ಲಿರುವ ವ್ಯಕ್ತಿಗಳು ತಮ್ಮ ನಡೆ, ನುಡಿ, ವ್ಯಕ್ತಿತ್ವ ಹಾಗೂ ಸಾರ್ವಜನಿಕ ಜೀವನದ ಮೂಲಕ ಸಮಾಜದ ಯುವ ಪೀಳಿಗೆಗೆ ಆದ-'ರ್ಶಪ್ರಾಯರಾಗಬೇಕು. ಆದರೆ ಇತ್ತೀಚಿನ ರಾಜ-ಕೀಯ ಬೆಳವಣಿಗೆಗಳಲ್ಲಿ ಕೆಲವರು ಸಾರ್ವಜನಿಕವಾಗಿ ಬಳಸುತ್ತಿರುವ ಭಾಷೆ, ವೈಯಕ್ತಿಕ ಟೀಕೆಗಳು ಹಾಗೂ ಪರಸ್ಪರ ಗೌರವವಿಲ್ಲದ ವರ್ತನೆಗಳು ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ.

ರಾಜಕಾರಣಿಗಳ ಮಾತುಗಳು ಯುವಕರ ಮೇಲೆ ಪ್ರಭಾವ ಬೀರುತ್ತವೆ. ಇಂದಿನ ಯುವ ಪೀಳಿಗೆ ರಾಜಕೀಯ ನಾಯಕರನ್ನು ಕೇವಲ ಆಡಳಿತಗಾರರನ್ನಾಗಿ ನೋಡುವುದಿಲ್ಲ. ಅವರ ಮಾತು, ವರ್ತನೆ, ನಿರ್ಧಾರಗಳು ಹಾಗೂ ಸಾರ್ವಜನಿಕ ಜೀವನವನ್ನು ಗಮನಿಸಿ ಅನೇಕ ವಿಚಾರಗಳನ್ನು ಕಲಿಯುತ್ತದೆ. ರಾ ಜಕಾರಣಿಗಳು ಮಾತನಾಡುವ ಭಾಷೆ, ವಿರೋಧಿಗಳನ್ನು ಗೌರವಿಸುವ ರೀತಿ, ಭಿನ್ನಾಭಿಪ್ರಾಯಗಳನ್ನು ಎ ದುರಿಸುವ ವಿಧಾನ ಮತ್ತು ಸಾರ್ವಜನಿಕ ಸಮಸ್ಯೆಗಳಿಗೆ



ಸ್ಪಂದಿಸುವ ಮನೋಭಾವ ಯುವಕರ ಮೇಲೆ ಪ್ರಭಾವ ಬೀರುತ್ತವೆ.

ಹೀಗಿರುವಾಗ ರಾಜಕೀಯ ನಾಯಕರು ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡುವಾಗ ತಮ್ಮ ಪದಗಳ ಆಯ್ಕೆಯ ಬಗ್ಗೆ ಎಚ್ಚರಿಕೆ ವಹಿಸಬೇಕು. ಹಿರಿಯ ನಾಯಕರು ಪರಸ್ಪರ ಗೌರವದಿಂದ ಚರ್ಚೆ ನಡೆಸಿದರೆ ಯುವಕರಿಗೂ ಆರೋಗ್ಯಕರ ರಾಜ-ಕೀಯ ಸಂಸ್ಕೃತಿ ಕಲಿಯಲು ಸಾಧ್ಯವಾಗುತ್ತದೆ. ಅದಕ್ಕೆ ವಿರುದ್ಧವಾಗಿ, ವೈಯಕ್ತಿಕ ನಿಂದನೆ, ಅವಹೇಳನಕಾರಿ ಹೇಳಿಕೆಗಳು ಹಾಗೂ ಅಸಭ್ಯ ಭಾಷೆಯ ಬಳಕೆ ಸಾಮಾನ್ಯವಾಗುತ್ತಾ ಹೋದರೆ, ಸಾರ್ವಜನಿಕ ಚರ್ಚೆಯಲ್ಲಿಯೂ ಇಂತಹ ವರ್ತನೆ ಸಹಜ ಎಂಬ ತಪ್ಪು ಸಂದೇಶ ಯುವಕರಿಗೆ ತಲುಪುವ ಅಪಾಯವಿದೆ.

**ಟೀಕೆ ಇರಲಿ, ಆದರೆ ಸಂಸ್ಕಾರ ಮೀರದಿರಲಿ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ-ಕೀಯ ಟೀಕೆಗಳು ಸಹಜ. ಆಡಳಿತದ ತಪ್ಪುಗಳನ್ನು ಪ್ರಶ್ನಿಸುವುದು, ಜನವಿರೋಧಿ ನಿರ್ಧಾರಗಳನ್ನು ವಿರೋಧಿಸುವುದು ಮತ್ತು ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದು ಪ್ರತಿಯೊಬ್ಬ ನಾಗರಿಕನ ಹಕ್ಕು ಹಾಗೂ ಜವಾಬ್ದಾರಿಯಾಗಿದೆ. ಆದ-'ರೆ ಟೀಕೆಗಳು ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುವಂತಹ ವೈಯಕ್ತಿಕ ನಿಂದನೆಗಳಾಗಿ ಬದಲಾಗಬಾರದು.

ಒಂದು ಪಕ್ಷದ ಸಿದ್ಧಾಂತವನ್ನು ಮತ್ತೊಂದು ಪಕ್ಷ ವಿರೋಧಿಸಬಹುದು. ಒಬ್ಬ ನಾಯಕನ ನಿರ್ಧಾರವನ್ನು ಮತ್ತೊಬ್ಬ ನಾಯಕ ಪ್ರಶ್ನಿಸಬಹುದು. ಆದರೆ ಭಿನ್ನಾಭಿಪ್ರಾಯಗಳಿಗೆ ವಿಚಾರಗಳ ಮೂಲಕ ಉತ್ತರ ನೀಡುವ ಬದಲು ವೈಯಕ್ತಿಕ ದಾಳಿಗೆ ಇಳಿಯುವುದು ರಾಜಕೀಯ ಚರ್ಚೆಯ ಗುಣಮಟ್ಟವನ್ನು ಕುಗ್ಗಿಸುತ್ತದೆ.

ರಾಜಕೀಯದಲ್ಲಿ ಎದುರಾಳಿಯನ್ನು ಸೋಲಿಸುವುದಕ್ಕಿಂತ ಜನರ ವಿಶ್ವಾಸವನ್ನು ಗೆಲ್ಲುವುದು ಮುಖ್ಯ. ಟೀಕೆ ಮಾಡುವಾಗ ಭಾಷೆಯ ಮೇಲೆ ಹಿಡಿತವಿರಲಿ, ಮಾತನಾಡುವಾಗ ಸಂಂ-ಯಮವಿರಲಿ ಹಾಗೂ ನಡೆದುಕೊಳ್ಳುವಾಗ ಸಮಾಜದ ಹಿತದೃಷ್ಟಿಯಿರಲಿ.

ಅಧಿಕಾರಕ್ಕಿಂತ ಜವಾಬ್ದಾರಿ ದೊಡ್ಡದು. ರಾಜ-ಕೀಯ ಸ್ಥಾನಮಾನ ಮತ್ತು ಅಧಿಕಾರದ ಜೊತೆಗೆ ಸಮಾಜದ ಬಗ್ಗೆ ದೊಡ್ಡ ಜವಾಬ್ದಾರಿಯೂ ಬರುತ್ತದೆ. ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗಲೂ ಸಮಾಜದ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ಪರಿಗಣಿಸಬೇಕು. ಜಾತಿ, ಧರ್ಮ, ಭಾಷೆ ಅಥವಾ ರಾಜಕೀಯ ಭಿನ್ನಾಭಿಪ್ರಾಯಗಳ ಆಧಾರದ ಮೇಲೆ ಜನರ ನಡುವೆ ದ್ವೇಷ ಹೆಚ್ಚಿಸುವಂತಹ ಮಾತುಗಳು ಮತ್ತು ವರ್ತನೆಗಳಿಂದ ದೂರವಿರಬೇಕು.

ಸಮಾಜದಲ್ಲಿ ಶಾಂತಿ, ಸಾಮರಸ್ಯ ಹಾಗೂ ಪರಸ್ಪರ ಗೌರವವನ್ನು ಬೆಳೆಸುವುದು ಎಲ್ಲರ ಜವಾಬ್ದಾ-ರಿಯಾಗಿದೆ. ವಿಶೇಷವಾಗಿ ಜನಪ್ರತಿನಿಧಿಗಳು ತಮ್ಮ ಮಾತು ಮತ್ತು ಕೃತಿಗಳ ಮೂಲಕ ಸಮಾಜವನ್ನು ಒಗ್ಗೂಡಿಸುವ ಪ್ರಯತ್ನ ಮಾಡಬೇಕು. ಜನರಲ್ಲಿ ವೈಷಮ್ಯ ಬೆಳೆಸುವ ಬದಲು ಜನರ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನಹರಿಸಬೇಕು.

ರಾಜಕಾರಣಿಗಳು ತಮ್ಮ ರಾಜಕೀಯ ವಿರೋಧಿಗಳನ್ನು ಶತ್ರುಗಳಂತೆ ಕಾಣದೆ, ವಿಭಿನ್ನ ಅಭಿಪ್ರಾಯ ಹೊಂದಿರುವ ಪ್ರಜಾಪ್ರಭುತ್ವದ ಸಹಭಾಗಿಗಳೆಂದು ಪರಿಗಣಿಸಬೇಕು. ರಾಜಕೀಯ ಸಂಘರ್ಷಗಳು ಚುನಾವಣೆಗೆ ಮತ್ತು ವಿಚಾರಗಳ ಚರ್ಚೆಗೆ ಸೀಮಿತವಾಗಿರಬೇಕು. ವೈಯಕ್ತಿಕ ದ್ವೇಷವಾಗಿ ಪರಿವರ್ತನೆಯಾಗಬಾರದು.

ಯುವಕರಿಗೆ ಮಾದರಿಯಾಗುವ ರಾಜಕೀಯ ಸಂಸ್ಕೃತಿ ನಿರ್ಮಾಣವಾಗಲಿ.

ಇಂದಿನ ಯುವಕರೇ ನಾಳಿನ ಸಮಾಜದ ನಾಯಕರು. ಅವರು ಉತ್ತಮ ಶಿಕ್ಷಣ, ಉದ್ಯೋಗ, ಸಾಮಾಜಿಕ ನ್ಯಾಯ, ವೈಜ್ಞಾನಿಕ ಮನೋಭಾವ ಮತ್ತು ದೇಶದ ಅಭಿವೃದ್ಧಿಯ ಕನಸುಗಳನ್ನು ಹೊಂದಿದ್ದಾರೆ. ಅಂತಹ ಯುವಕರಿಗೆ ರಾಜಕೀಯ ನಾಯಕರು ಸಕಾರಾತ್ಮಕ ಮಾದರಿಯಾಗಬೇಕು.

ರಾಜಕೀಯ ನಾಯಕರು ತಮ್ಮ ಅಧಿಕಾರವನ್ನು ಜನಸೇವೆಗೆ ಬಳಸುವುದು, ತಪ್ಪುಗಳನ್ನು ಒಪ್ಪಿಕೊಂಡು ತಿದ್ದಿಕೊಳ್ಳುವುದು, ವಿರೋಧಿಗಳ ಅಭಿಪ್ರಾಯಗಳನ್ನು ಆಲಿಸುವುದು, ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವುದು ಮತ್ತು ಕಾನೂನಿಗೆ ಗೌರವ ನೀಡುವುದನ್ನು ತಮ್ಮ ನಡವಳಿಕೆಯಲ್ಲಿ ತೋರಿಸಬೇಕು. ಇಂತಹ ಗುಣಗಳು ಯುವಕರಲ್ಲಿ ಜವಾಬ್ದಾರಿಯುತ ನಾಗರಿಕ ಮನೋಭಾವವನ್ನು ಬೆಳೆಸಲು ನೆರವಾಗುತ್ತವೆ.

ಯುವಕರು ರಾಜಕಾರಣಿಗಳಿಂದ ಕಲಿಯಬೇಕಾದದ್ದು ಜನಸೇವೆ, ನಾಯಕತ್ವ, ಶಿಸ್ತು, ಸಂಯಮ ಮತ್ತು ಸಾಮಾಜಿಕ ಜವಾಬ್ದಾರಿಯನ್ನೇ ಹೊರತು ವೈಯಕ್ತಿಕ ನಿಂದನೆ, ದ್ವೇಷದ ಭಾಷೆ ಹಾಗೂ ಪರಸ್ಪರ ಅವಹೇಳನ ಮಾಡುವ ಪ್ರವೃತ್ತಿಯನ್ನಲ್ಲ.

**ಸಾರ್ವಜನಿಕ ಜೀವನದಲ್ಲಿ ಮಾತಿನ ಘನತೆ ಕಾಪಾಡಿಕೊಳ್ಳಲಿ**

ಸಾಮಾಜಿಕ ಜಾಲತಾಣಗಳ ವ್ಯಾಪಕ ಬಳಕೆಯಿಂದ ರಾಜಕೀಯ ನಾಯಕರ ಮಾತುಗಳು ಕ್ಷಣಮಾತ್ರದಲ್ಲಿ ಸಾವಿರಾರು ಜನರನ್ನು ತಲುಪುತ್ತವೆ. ಆದ್ದರಿಂದ ಸಾರ್ವಜನಿಕ ವ್ಯಕ್ತಿಗಳು ಮಾತನಾಡುವಾಗ ಹೆಚ್ಚಿನ ಜವಾಬ್ದಾರಿ ವಹಿಸಬೇಕು. ಒಂದು ಹೇಳಿಕೆ ಸಮಾಜದಲ್ಲಿ ಉತ್ತಮ ಚರ್ಚೆಗೆ ಕಾರಣವಾಗಬಹುದು; ಅದೇ ಹೇಳಿಕೆ ಅಸಂಯಮಿತವಾಗಿದ್ದರೆ ಅನಗತ್ಯ ವಿವಾದ ಮತ್ತು ವೈಮನಸ್ಸಿಗೂ ಕಾರಣವಾಗಬಹುದು.



ರಾಜಕೀಯ ನಾಯಕರು ಪರಸ್ಪರ ಟೀಕೆ ಮಾಡಿಕೊಳ್ಳುವುದಕ್ಕಿಂತ ಜನರ ಸಮಸ್ಯೆಗಳ ಕುರಿತು ಚರ್ಚೆ ನಡೆಸಲು ಹೆಚ್ಚಿನ ಸಮಯ ಮೀಸಲಿಡಬೇಕು. ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದು, ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿ ನೀಡುವುದು ಮತ್ತು ಸಾರ್ವಜನಿಕ ಹಣದ ಬಳಕೆಯಲ್ಲಿ ಪಾರದರ್ಶಕತೆ ಕಾಪಾಡುವುದು ರಾಜಕೀಯ ಚರ್ಚೆಯ ಪ್ರಮುಖ ಭಾಗವಾಗಬೇಕು.

## ರಾಜಕೀಯ ನಾಯಕರಿಗೆ ಮನವಿ

**ರಾಜಕೀಯ ಕ್ಷೇತ್ರದಲ್ಲಿರುವ ಪ್ರತಿಯೊಬ್ಬರೂ ತಮ್ಮ ನಡೆ-ನುಡಿಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ಮಾತುಗಳಿಂದ ಯುವ ಪೀಳಿಗೆಗೆ ಯಾವ ಸಂದೇಶ ಹೋಗುತ್ತಿದೆ? ನಮ್ಮ ವರ್ತನೆಯಿಂದ ಸಮಾಜದಲ್ಲಿ ಗೌರವ ಹೆಚ್ಚುತ್ತಿದೆಯೇ ಅಥವಾ ದ್ವೇಷ ಬೆಳೆಯುತ್ತಿದೆಯೇ? ನಮ್ಮ ರಾಜಕೀಯ ಚಟುವಟಿಕೆಗಳು ಜನರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿವೆಯೇ ಅಥವಾ ವೈಯಕ್ತಿಕ ಸಂಘರ್ಷಗಳಿಗೆ ಮಾತ್ರ ಸೀಮಿತವಾಗಿವೆಯೇ? ಎಂಬ ಪ್ರಶ್ನೆಗಳನ್ನು ಪ್ರತಿಯೊಬ್ಬ ರಾಜಕಾರಣಿಯೂ ತಮಗೆ ತಾವೇ ಕೇಳಿಕೊಳ್ಳಬೇಕು.**

**ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಇರಲಿ, ತತ್ವಗಳ ಆಧಾರದ ಮೇಲೆ ಹೋರಾಟಗಳು ನಡೆಯಲಿ, ಆಡಳಿತದ ತಪ್ಪುಗಳನ್ನು ನಿರ್ಭೀತಿಯಿಂದ ಪ್ರಶ್ನಿಸಲಿ. ಆದರೆ ಈ ಎಲ್ಲದರ ನಡುವೆ ಮಾನವೀಯತೆ, ಪರಸ್ಪರ ಗೌರವ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಮರೆಯಬಾರದು.**

**ರಾಜಕಾರಣಿಗಳ ನಡೆ-ನುಡಿ ಸಮಾಜಕ್ಕೆ ಮಾರಕವಾಗದೆ, ಸಮಾಜದ ಅಭಿವೃದ್ಧಿಗೆ ಪೂರಕವಾಗಿರಬೇಕು. ರಾಜಕೀಯ ನಾಯಕರು ಯುವ ಪೀಳಿಗೆಗೆ ಕೇವಲ ಭಾಷಣಗಳ ಮೂಲಕವಲ್ಲ, ತಮ್ಮ ಆದರ್ಶಪ್ರಾಯ ನಡವಳಿಕೆಯ ಮೂಲಕವೂ ಮಾರ್ಗದರ್ಶನ ನೀಡಬೇಕು. ಅಧಿಕಾರ ಶಾಶ್ವತವಲ್ಲ; ಆದರೆ ವ್ಯಕ್ತಿಯ ನಡೆ-ನುಡಿ ಮತ್ತು ಸಾರ್ವಜನಿಕ ಜೀವನದ ಮೂಲಕ ಸಮಾಜದ ಮೇಲೆ ಬೀರುವ ಪ್ರಭಾವ ದೀರ್ಘಕಾಲ ಉಳಿಯುತ್ತದೆ.**

**ಆದ್ದರಿಂದ ರಾಜಕೀಯ ನಾಯಕರು ವೈಯಕ್ತಿಕ ಪ್ರತಿಷ್ಠೆಗಿಂತ ಸಮಾಜದ ಹಿತಕ್ಕೆ ಆದ್ಯತೆ ನೀಡಿ, ಆರೋಗ್ಯಕರ ರಾಜಕೀಯ ಸಂಸ್ಕೃತಿಯನ್ನು ಬೆಳೆಸಲು ಮುಂದಾಗಬೇಕು.**



## ಸಚಿವ ಡಾ.ಅಜಯ್ ಸಿಂಗ್ ಕಲಬುರಗಿ, ಜೇವರ್ಗಿಗೆ ಭೇಟಿ- ರೈತರು, ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಕಲಬುರಗಿ:ರಾಜ್ಯ ಸಕ್ರಾದ ಸಮ್ಣ ನೀರಾವರಿ, ವಿಜ್ಞಾನ, ತಂತ್ರಜ್ಞಾನ ಸಚಿವರಾಗಿರುವ ಡಾ.ಅಜಯ್ ಸಿಂಗ್ ಅವರು 2 ದಿನ ಕಲಬುರಗಿ ಹಾಗೂ ಜೇವರ್ಗಿಲ್ಲಿ ಸಂಚರಿಸಿ ಸಾರ್ವಜನಿಕರನ್ನು ಭೇಟಿ ಮಾಡಿ ಅಹವಾಲು ಆಲಿಸಿದರು.

ಬರಗಾಲ ಪೀಡಿತವಾಗಿರುವ ಈ ಸಂದರ್ಬದಲ್ಲಿ ರೈತರು ಅನೇಕರು ಸಚಿವರನ್ನು ಕಂಡು ಬೇಗ ಪರಿಹಾರ ಕೊಡಿಸಲು ಆಗ್ರಹಿಸಿ ಮನವಿ ಸಲ್ಲಿಸಿದರು. ಕುಡಿಯುವ ನೀರಿನ ಕೊತೆ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಜನತೆ ಸಚಿವರ ಗಮನಕ್ಕೆ ತಂದರು. ತಕ್ಷಣವೇ ಜೇವರ್ಗಿ, ಕಲಬುರಗಿ ಅಧಿಕಾರಗಳನ್ನು ಕರೆ ಮಾಡಿ ಸಚಿವರು ಸೂಕ್ತ ಪರಿಹಾರೋಪಾಯಗಳಿಗೆ ಸೂಚಿಸಿದರು.

ಜೇವರ್ಗಿ ತಾಲೂಕಿನ ಮಂದೇವಾಲ ಹಾಗೂ ಸೊನ್ನ ಗ್ರಾಮಕ್ಕೆ ಭೇಟಿ ನೀಡಿ ತೆರಳುವಾಗ ವಿವಿಧ ಗ್ರಾಮದ ಮುಖಂಡರು , ರೈತರು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡಿ ಕುಂದು ಕೊರತೆಗಳನ್ನು ಆಲಿಸಿ ಸೂಕ್ತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸಚಿವರಾದ ಡಾ. ಅಜಯ್ ಸಿಂಗ್ ಸೂಚನೆ ನೀಡಿದರು.

ಇನ್ನು ಕಲಬುರಗಿಯ ತಮ್ಮ ನಿವಾಸದಲ್ಲಿ ಸಚಿವರಾದ ಡಾ. ಅಜಯ್ ಸಿಂಗ್ ಅವರು ಹಿರಿಯ ಮುಖಂಡರು ಹಾಗೂ ಸಾರ್ವಜನಿಕ-ರಿಗೆ ಭೇಟಿಯಾಗಿ ಕುಂದುಕೊರತೆಗಳನ್ನು ಆಲಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದರು. ಇದೇ ಸಂದರ್ಭದಲ್ಲಿ ಸಾರ್ವಜನಿಕರು ಅಹವಾಲುಗಳ ಮನವಿ ಪತ್ರದ ಜೊತೆಗೇ ಬನ್ನಿ ಕೊಟ್ಟು ಸಚಿವರಿಗೆ ಶುಭ ಕೋರಿದರು. ತದನಂತರ ವಿವಿಧ ಪ್ರಮುಖ ವಿಷಯಗಳ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಗ್ರಾಮಗಳ ಮುಖಂಡರು ಹಾಗೂ ಪಕ್ಷದ ಹಿರಿಯ ಮುಖಂಡರೊಂದಿಗೆ ಹಲವು ಪ್ರಮುಖ ವಿಷಯಗಳ ಕುರಿತು ಸಚಿವ ಡಾ. ಅಜಯ್ ಸಿಂಗ್ ಅವರು ಚರ್ಚಿಸಿದರು.

## ರಾಮಾಯಣ ಜಗತ್ತಿಗೆ ನೀಡಿದ ಮಹರ್ಷಿ ವಾಲ್ಮೀಕಿ :ಅರಳಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಹಿಂದು ಧರ್ಮದ ಪವಿತ್ರ ಗ್ರಂಥಗಳಲ್ಲಿ ಒಂದಾಗಿರುವ ರಾಮಾಯಣ ಮೂಲ ಗ್ರಂಥವನ್ನು ರಚನೆ ಮಾಡಿದ ಮಹಾತಪಸ್ವಿ ವಾಲ್ಮೀಕಿ ಎಂದು ಪ್ರಾಧ್ಯಾಪಕ ರವಿಕುಮಾರ ಅರಳಿ ಹೇಳಿದರು.

ತಾಲೂಕು ಆಡಳಿತ ತಾಪಂ ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ನಗರದ ಮಹರ್ಷಿ ವಾಲ್ಕೀಕಿ ಭವನ ದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಮಾತನಾಡಿ, ನಾಲ್ಕು ವೇದಗಳ ಸಾರವನ್ನೇ ವಾಲ್ಮಿಕಿ ಮಹರ್ಷಿಗಳು ರಾಮಾಯಣದಲ್ಲಿ ಅನೇಕ ಪಾತ್ರಗಳ ಮೂಲಕ ತುಂಬಿದರು. ಸೂರ್ಯ ಚಂದ್ರರಿರುವ ತನಕ ಜನ ಸಾಮಾನ್ಯರ ಬಾಳಲ್ಲಿ ಬೆಳಗುವ ಬೆಳಕಾಗಿ ಲೋಕನೀತಿಯನ್ನು ಬ್ರಹ್ಮ ಸತ್ಯವನ್ನು ಸಾರಿದರು ಎಂದರು,

ನಗರ ಪ್ರಾಧಿಕಾರ ಅಧ್ಯಕ್ಷ ಅಜೀತ ಧನಶೆಟ್ಟಿ, ಸಮಾಜ ಕಲ್ಯಾಣ ಅಧಿಕಾರಿ ಉಮೇಶ ಲಮಾಣಿ, ಬಸವರಾಜ ಗೊರನಾಳ ಮಾತನಾಡಿದರು.

ವೇದಿಕೆಯ ಮೇಲೆ ಇಒ ಮಹಾದೇವಪ್ಪ ಏವೂರ, ಅರ್ಜುನ ನಾಯ್ಕೋಡಿ, ಸಂಜೀವ ನಾಯ್ಕೋಡಿ, ಎ.ಪಿ.ಬಿರಡ, ಎ.ಪಿ.ಹುಣಸಗಿ, ಸಂಜೀವ ಚವ್ಹಾಣ ಮತ್ತಿತ-ರಿದ್ದರು.

ಸಮಾರಂಭದಲ್ಲಿ ದತ್ತು ನಾಯ್ಕೋಡಿ, ವಿಠೋಬಾ ಬೇಡರ, ಮುಕುಂದ ಬೇಡರ, ನಾಗು ನಾಯ್ಕೋಡಿ, ಹಣಮಂತ ನಾಯ್ಕೋಡಿ ಮತ್ತಿತರಿದ್ದರು.

ಇದಕ್ಕೂ ಮೊದಲು ತಾಲೂಕಾ ಆಡಳಿತ ವತಿಯಿಂದ ಆಡಳಿತ ಸೌಧದಲ್ಲಿ ಕಾರ್ಯಕ್ರಮ ನಡೆಯಿತು

## ಹಿರಿಯ ಜಾನಪದ ಗಾಯಕ ದೇವದಾಸ ಚಿಮಕೋಡಗೆ ರಾಜ್ಯ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ

ಬೀದರ್: ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ವತಿಯಿಂದ ಮಂಡ್ಯ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ವಾರ್ಷಿಕ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೀದರ್ ಜಿಲ್ಲೆಯ ಹಿರಿಯ ಜಾನಪದ ಗಾಯಕ ದೇವದಾಸ ಚಿಮಕೋಡ ಅವರಿಗೆ ಪ್ರತಿಷ್ಠಿತ ಗೌರವ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಕಳೆದ ಸುಮಾರು 35 ವರ್ಷಗಳಿಂದ ಜಾನಪದ ಕಲೆಯ ಉಳಿವು ಮತ್ತು ಬೆಳವಣಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ದೇವದಾಸ ಚಿಮಕೋಡ ಅವರು, ತಮ್ಮದೇ ಆದ ಕಲಾ ತಂಡವನ್ನು ಕಟ್ಟಿಕೊಂಡು ಬೀದರ್ ಜಿಲ್ಲೆ ಸೇ-ರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಹಾಗೂ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಜಾನಪದ ಕಲಾ ಪ್ರದರ್ಶನಗಳನ್ನು ನೀಡಿದ್ದಾರೆ. ಇವರ ಸಾಧನೆ ಬೀದರ್ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ.

ಜಾನಪದ ಗಾಯಕನಾಗಿ ಗುರುತಿಸಿಕೊಂಡಿರುವ ದೇವದಾಸ ಚಿಮಕೋಡ ಅವರು ಜಾನಪದ ಹಾಡುಗಾರಿಕೆ ಹಾಗೂ ಜಾನಪದ ನೃತ್ಯಗಳ ಕುರಿತು ಅಧ್ಯಯನ ನಡೆಸಿ ಪ್ರಮಾಣಪತ್ರ ಕೋರ್ಸ್ ಪೂರ್ಣಗೊಳಿಸಿದ್ದಾರೆ. ಜಿಲ್ಲೆಯ ಅನೇಕ ಕಲಾವಿದರಿಗೆ ಪ್ರೇರಣೆಯಾಗಿರುವ ಇವರು, ಬೀದರ್ ಉತ್ಸವ, ಜನಪದ ಉತ್ಸವ, ಜನಪರ ಉತ್ಸವ, ಬಸವ ಉತ್ಸವ, ಕಲಬುರಗಿ ಉತ್ಸವ, ಮೈಸೂರು ಉತ್ಸವ, ಯುವಜನೋತ್ಸವ, ಯುವಜನ ಮೇಳ ಸೇರಿದಂತೆ ರಾಜ್ಯದ ವಿವಿಧೆಡೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಕಲೆಗಾಗಿ ಬದುಕು, ಬದುಕಿಗಾಗಿ ಕಲೆ ಎಂಬ ಆಶಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ದೇವದಾಸ ಚಿಮಕೋಡ ಅವರು, ಸ್ವತಃ ಹಾಡುಗಳನ್ನು ರಚಿಸಿ, ಅವುಗಳಿಗೆ ರಾಗ ಸಂಯೋಜನೆ ಮಾಡುತ್ತಾರೆ. ಡಫಲಿ ನುಡಿಸುತ್ತಾ ಹಾಡುವ ವಿಶಿಷ್ಟ ಶೈಲಿ ಅವರದ್ದಾಗಿದೆ. ಸಾಮಾಜಿಕ ಜಾಗೃತಿ ಮೂಡಿಸುವ ಉದ್ದೇಶದಿಂದ ವಿವಿಧ ವಿಷಯಗಳ ಕುರಿತು 40ಕ್ಕೂ ಹೆಚ್ಚು ಹಾಡುಗಳನ್ನು ರಚಿಸಿ ಹಾಡಿರುವ ಇವರು, ತಮ್ಮ ಗಾಯನದ ಮೂಲಕ ಜನರಲ್ಲಿ ಅರಿವು ಮೂಡಿಸುತ್ತಿದ್ದಾರೆ. ಬೀದರ್ ಜಿಲ್ಲೆಯ ಬಹುತೇಕ ಹಳ್ಳಿಗಳಿಗೆ ತೆರಳಿ ಜಾನಪದ ಕಾರ್ಯಕ್ರಮಗಳನ್ನು ನೀಡಿರುವ ಇವರು, ಗ್ರಾಮೀಣ ಭಾಗದಲ್ಲಿ ಜಾನಪದ ಕಲೆಯ ಪ್ರಸಾರ ಮತ್ತು ಪ್ರಚಾರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.

ದೇವದಾಸ ಚಿಮಕೋಡ ಅವರು ರಚಿಸಿರುವ ಜಾಗೃತಿ ಗೀತೆಗಳನ್ನು ಒಳಗೊಂಡ 'ಜನಜಾಗೃತಿ' ಹಾಡುಗಳ ಪುಸ್ತಕವನ್ನು ಪ್ರಕಟಿಸಿದ್ದಾರೆ.



## ಹತಗುಂದಾ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ಕಲಬುರಗಿ:ತಾಲ್ಲೂಕಿನ ಹತಗುಂದಾ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಪಟ್ಟಣ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಪಾರ್ವತಿ ಓಗೆ, ಶಾಲಾ ಮುಖ್ಯೋಪಾಧ್ಯಾಯ ಹಾಗೂ ಸರಕಾರಿ ನೌಕರರ ಸಂಘದ ಜಿಲ್ಲಾ ಹಿರಿಯ ಉಪಾಧ್ಯಕ್ಷರಾದ ದೇವಿಂದ್ರಪ್ಪ ಗಣಮುಖಿ, ಶಾಲಾ ಸಹ ಶಿಕ್ಷಕರಾದ ಮಹೇಶ್ ದೇಶಮುಖಿ, ಅಕ್ತರ್ ಶಿರೀನ್ ಬೇಗಂ, ಸುರೇಖಾ ಪಾಟೀಲ, ಶಾಲೆಯ ಮಕ್ಕಳು, ಗ್ರಾಮದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ನಿಸರ್ಗ ಚಿತ್ರಗಳ ರಚನೆಯಲ್ಲಿ ನೆರಳು-ಬೆಳಕಿನ ಸಂಯೋಜನೆ ಬಹಳ ಮುಖ್ಯ



ಕಲಬುರಗಿ: ಜಲವರ್ಣ ಮಾಧ್ಯಮ ಇತರೆ ಕಲಾ ಮಾಧ್ಯಮಕ್ಕಿಂತಲೂ ಭೂದೃಶ್ಯ ಕಲಾಕೃತಿಗಳ ರಚನೆಗೆ ಅತ್ಯುತ್ತಮವಾದ ಮಾಧ್ಯಮವಾಗಿದೆ. ಜೊತೆಗೆ ಬಹು ಕಠಿಣವಾದ ಮಾಧ್ಯಮವೂ ಹೌದು. ನಿಸರ್ಗ ಚಿತ್ರಗಳ ರಚನೆಯಲ್ಲಿ ನೆರಳು-ಬೆಳಕಿನ ಸಂಯೋಜನೆ ಬಹಳ ಮುಖ್ಯ ಎಂದು ಬೆಂಗಳೂರಿನ ಹಿರಿಯ ಚಿತ್ರಕಲಾವಿದ ಶಂಕರಪ್ಪ ನವಲಬಾ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯ ಅಡಿಯಲ್ಲಿ ನಗರದ ಮಾನಕರ್ ಬಡಾವಣೆಯ ಬಿಸಿಲು ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ ರಾಯಚೂರಿನ ವಿಶೇಷ ಚೇತನ ಯುವ ಚಿತ್ರಕಲಾವಿದ ಹೇಮರೆಡ್ಡಿ ಎನ್. ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿ ಕಲಾವಿದ ಹೇಮರೆಡ್ಡಿ ದೈಹಿಕವಾಗಿ ವಿಶೇಷ ಚೇತನವಾಗಿದ್ದರೂ, ಮಾನಸಿಕವಾಗಿ ಹೆಚ್ಚು ಸದೃಢವಾಗಿ ತನ್ಮಯತೆ ಮತ್ತು ಏಕಾಗ್ರತೆಯಿಂದ ಅತ್ಯುತ್ತಮವಾದ ಹಲವಾರು ನಿಸರ್ಗ ಚಿತ್ರಗಳನ್ನು ರಚಿಸಿ, ಪ್ರದರ್ಶಿಸಿ, ಮಾದರಿ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ ಎಂದರು.

ಹಿರಿಯ ಚಿತ್ರಕಲಾವಿದ ಕೆ.ಎಸ್. ನಾಗುರೆ ಮುಖ್ಯ ಅತಿಥಿಯಾಗಿ ಮಾತನಾಡಿ ಹೇಮರೆಡ್ಡಿ ಅವರು ಸಣ್ಣ ಗಾತ್ರದಲ್ಲಿ ಸೂಕ್ಷ್ಮವಾದ ಜಲವರ್ಣ ಕಲಾಕೃತಿಗಳನ್ನು ಅತ್ಯಂತ ಕೌಶಲ್ಯಪೂರ್ಣವಾಗಿ ರಚಿಸಿದ್ದು, ಅವರು ಮುಂದಿನ ದಿನಗಳಲ್ಲಿ ದೊಡ್ಡ ಗಾತ್ರದ ಚಿತ್ರಕಲಾಕೃತಿಗಳನ್ನು ವಿವಿಧ ಮಾಧ್ಯಮಗಳಲ್ಲಿ ರಚಿಸಲಿ ಎಂದು ಆಶಿಸಿದರು.ಹಿರಿಯ ಚಿತ್ರಕಲಾವಿದ ಮತ್ತು ವ್ಹಿ.ಬಿ. ಬಿರಾದಾರ ಕಲಾ ಪ್ರತಿಷ್ಠಾನದ ಅಧ್ಯಕ್ಷ ವ್ಹಿ. ಬಿ. ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ ಯುವ ಕಲಾವಿದರು ನೈಜ ಚಿತ್ರ ರಚನೆ ಜೊತೆಗೆ ಸೃಜನಶೀಲತೆಯನ್ನು ಮೈಗೂಡಿಸಿಕೊಂಡು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಕಲಾಕೃತಿ ರಚಿಸಿಬೇಕೆಂದರು.

ಕಾರ್ಯಕ್ರಮದಲ್ಲಿ ಶೈಲಜಾ ಬಿರಾದಾರ, ನಿರ್ಮಲಾ ನವಲಬಾ, ಸುನಿಲ್ ಚೆಂಗಟಾ, ಬಾಬುರಾವ್ ದಂಗಾಪುರ, ಡಾ. ಪರಶುರಾಮ ಪಿ, ಡಾ. ಕೆ.ಎಂ. ಕುಮಾರಸ್ವಾಮಿ, ಸೇರಿದಂತೆ ಮುಂತಾದವರಿದ್ದರು. ಅತಿಥಿ ಗಣ್ಯರನ್ನು ಸ್ವಾಗತಿಸಿ, ಮಲ್ಲಿಕಾರ್ಜುನ ಆಲೂರು ಕಾರ್ಯಕ್ರಮ ನಿರ್ವಹಿಸಿದರು. ಮಲ್ಲಿಕಾರ್ಜುನ ಕೊರಳ್ಳಿ ವಂದಿಸಿದರು.

# ನಿಮ್ಮ ಬದುಕು.. ನಿಮ್ಮಿಷ್ಟ.. ಅಷ್ಟೇ..!

**ನಮ್ಮ ಬದುಕು ನಮಗೆ ಇಷ್ಟವಾಗುವಂತಿರಬೇಕು. ಆದರೆ ಅದು ನಮ್ಮ ಜವಾಬ್ದಾರಿಗಳನ್ನೂ ಗೌರವಿಸುವಂತಿರಬೇಕು. ನಮ್ಮ ಸಂತೋಷ ನಮಗಿರಬೇಕು. ಆದರೆ ಅದಕ್ಕಾಗಿ ಮತ್ತೊಬ್ಬರ ಬದುಕಿಗೆ ತೊಂದರೆ ಕೊಡಬಾರದು. ನಮ್ಮಿಷ್ಟದಂತೆ ನಡೆಯಬೇಕು. ಆದರೆ ನಮ್ಮ ತಪ್ಪನ್ನು ಒಪ್ಪಿಕೊಳ್ಳುವಷ್ಟು ಪ್ರಾಮಾಣಿಕತೆಯೂ ಇರಬೇಕು.**




ಪ್ರಶಾಂತ ಕುಲಕರ್ಣಿ. ಉಪನ್ಯಾಸಕರು
ಸಿಂದಗಿ – ವಿಜಯಪುರ ಜಿಲ್ಲೆ

■ *ಉದಯರಶ್ಮಿ ದಿನಪತ್ರಿಕೆ*

ಕೆಲವೊಮ್ಮೆ ನಮ್ಮ ಬದುಕಿನಲ್ಲಿ ನಡೆಯುವ ದೊಡ್ಡ ಘಟನೆಗಳಿಗಿಂತ, ಯಾರೋ ಸಹಜವಾಗಿ ಹೇಳಿದ ಒಂದು ಸಣ್ಣ ಮಾತು ನಮ್ಮ ಮನಸ್ಸಿನಲ್ಲಿ ಬಹಳ ಹೊತ್ತು ಉಳಿದುಬಿಡುತ್ತದೆ. ಆ ಕ್ಷಣದಲ್ಲಿ ನಾವು ಉತ್ತರ ಕೊಟ್ಟು ಸುಮ್ಮನಾಗುತ್ತೇವೆ. ಆದರೆ ಮನೆಗೆ ಬಂದ ನಂತರ ಅದೇ ಮಾತು ಮತ್ತೆ ಮತ್ತೆ ನೆನಪಾಗುತ್ತದೆ. "ಅವರು ಹೇಳಿದ್ದು ಸರಿಯೇ? ನಾನು ಮಾಡುತ್ತಿರುವುದು ತಪ್ಪೇ? ನಾನು ಹೀಗೆ ಮಾಡಬಾರದಿತ್ತೇ?" ಎಂಬ ಪ್ರಶ್ನೆಗಳು ಮನಸ್ಸಿನೊಳಗೆ ಸದ್ದಿಲ್ಲದೆ ಓಡಾಡತೊಡಗುತ್ತವೆ. ಇತ್ತೀಚೆಗೆ ನನಗೂ ಅಂತಹದ್ದೊಂದು ಅನುಭವವಾಯಿತು.

ಹಾಗೆ ಒಂದು ದಿನ ಸಹೋದ್ಯೋಗಿಗಳೊಂದಿಗೆ ಮಾತನಾಡುತ್ತಿರುವಾಗ ಒಬ್ಬ ಶಿಕ್ಷಕರು ನನ್ನ ಕಡೆ ನೋಡಿ, "ಸರ್, ನೀವು ಯಾವಾಗಲೂ ಫೋನ್ ಜಾಸ್ತಿ ಬಳಸುತ್ತೀರಿ. ಯಾವಾಗ ನೋಡಿದರೂ ಫೋನ್‌ನಲ್ಲೇ ಇರುತ್ತೀರಿ. ಅದರಿಂದ ಏನು ಪ್ರಯೋಜನ? ಸುಮ್ಮನೆ ಟೈಮ್ ವೇಸ್ಟ್. ಹೀಗೆ ಫೋನ್ ಬಳಸುವುದರಿಂದ ಆರೋಗ್ಯವನ್ನೂ ಹಾಳು ಮಾಡಿಕೊಳ್ಳುತ್ತಿದ್ದೀರಿ" ಎಂದು ನೇರವಾಗಿ ಹೇಳಿದರು.

ಅವರ ಮಾತು ಕೇಳಿದಾಗ ನನಗೆ ಸ್ವಲ್ಪ ಬೇಸರವಾಯಿತು. ಆದರೆ ಅವರು ನನ್ನ ಬಗ್ಗೆ ಕಾಳಜಿಯಿಂದಲೇ ಹೇಳಿರಬಹುದು ಎಂಬುದನ್ನೂ ಅರ್ಥ ಮಾಡಿಕೊಂಡೆ. ಅವರ ಕಣ್ಣಿಗೆ ನಾನು



ಯಾವಾಗಲೂ ಫೋನ್ ಹಿಡಿದುಕೊಂಡಿರುವ ವ್ಯಕ್ತಿಯಾಗಿ ಕಾಣುತ್ತಿದ್ದೆ. ಆದರೆ ನನ್ನ ಪಾಲಿಗೆ ಆ ಫೋನ್ ಕೇವಲ ಸಮಯ ಕಳೆಯುವ ಸಾಧನವಲ್ಲ. ನಾನು ಫೋನ್ ಬಳಸುತ್ತೇನೆ. ನನಗೆ ಬೇಕಾದಷ್ಟು ಬಳಸುತ್ತೇನೆ. ಮಾಹಿತಿಗಾಗಿ ಹುಡುಕುತ್ತೇನೆ, ಹೊಸ ವಿಷಯಗಳನ್ನು ಓದುತ್ತೇನೆ, ಶಿಕ್ಷಣ ಕ್ಷೇತ್ರದ ವಿಚಾರಗಳನ್ನು ತಿಳಿದುಕೊಳ್ಳುತ್ತೇನೆ, ವಿದ್ಯಾರ್ಥಿಗಳಿಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸುತ್ತೇನೆ. ಅದರಲ್ಲೂ ಮುಖ್ಯವಾಗಿ ನನ್ನ ಬರವಣಿಗೆಯ ಬಹುಪಾಲು ಇದೇ ಮೊಬೈಲ್ ಮೂಲಕ ನಡೆಯುತ್ತದೆ. ಅದ-ರಿಂದ ನನಗೆ ಸಿಗುವ ಸಂತೋಷವನ್ನು ಮತ್ತೊಬ್ಬರು ಅ



ರ್ಥಮಾಡಿಕೊಳ್ಳಲೇಬೇಕು ಎಂದೇನಿಲ್ಲ. ಅದು ನನ್ನ ಹವ್ಯಾಸ, ನನ್ನ ಸಂತೋಷ.

ಅದಕ್ಕಾಗಿಯೇ ನಾನು ಅವರಿಗೆ ಹೇಳಿದೆ, "ಸರ್, ನನಗೆ ಫೋನ್ ಬಳಸುವುದರಲ್ಲಿ ಸಂತೋಷ ಸಿಗುತ್ತದೆ. ನೀವು ಹೀಗೆ ಮಾಡಬೇಡಿ ಎಂದರೂ ನನ್ನ ಹವ್ಯಾಸವನ್ನೇ ಬದಲಿಸಿಕೊಳ್ಳಲು ಸಾಧ್ಯವಿಲ್ಲ ಎಂದೆ. ಅವರ ಮಾತು ಅವರ ದೃಷ್ಟಿಯಲ್ಲಿ ಸರಿಯಾಗಿ-ತ್ತು. ನನ್ನ ಮಾತು ನನ್ನ ಅನುಭವದಲ್ಲಿ ಸರಿಯಾಗಿತ್ತು.

ಆದರೆ ನನಗೆ ಆ ವಿಷಯ ಅಲ್ಲಿಗೆ ಮುಗಿಯಲಿಲ್ಲ. ಮನೆಗೆ ಬಂದ ನಂತರ ಅವರ ಮಾತು ಮತ್ತೆ ಮತ್ತೆ ನೆನಪಾಯಿತು. ಆಗ ನನಗೆ ಒಂದು ವಿಷಯ ಸ್ಪಷ್ಟವಾಯಿತು. ನಮ್ಮ ಬದುಕಿನ ಬಗ್ಗೆ ಅಭಿಪ್ರಾಯ ಹೇಳುವವರು ಬಹಳ ಜನ. ಆದರೆ ಆ ಬದುಕನ್ನು ಬದುಕಬೇಕಾದದ್ದು ನಾವೇ.

ಇದೇ ವಿಚಾರ ನನಗೆ ನನ್ನ ಸ್ನೇಹಿತರೊಬ್ಬರ ಘಟನೆ ನೆನಪಿಸಿತು. ಅವರ ಮನೆಯ ಮೇಲೆ ಮೊದಲ ಮಹಡಿ ಕಟ್ಟಿಸಬೇಕೆಂಬ ಆಸೆ. ಆದರೆ ಅದಕ್ಕಾಗಿ ಹಣ ಹೊಂದಿಸುವುದು ಅವರಿಗೆ ದೊಡ್ಡ ಸಮಸ್ಯೆಯಾಗಿತ್ತು. ಈಗಾಗಲೇ ಮನೆಸಾಲು ಇತ್ತು. ಹಣಕಾಸಿನ ಪರಿಸ್ಥಿತಿಯೂ ಅಷ್ಟೇನೂ ಅನುಕೂಲಕರವಾಗಿರಲಿಲ್ಲ. ಇಬ್ಬರು



ಸುಖವಾಗಿ ಬದುಕಲು ಈಗಿರುವ ಮನೆಯೇ ಸಾಕಾಗಿತ್ತು. ಇದನ್ನು ಅವರೇ ನನ್ನ ಬಳಿ ಹಲವು ಬಾರಿ ಹೇಳಿಕೊಂಡಿದ್ದರು. ಆದರೂ ಅವರ ಹತ್ತಿರದ ಬಂಧುಗಳೊಬ್ಬರು ಸಿಕ್ಕಾಗಲೆಲ್ಲಾ, "ಈ ತರಹದ ಗ್ರೌಂಡ್ ಫ್ಲೋರ್ ಮನೆ ಇಟ್ಟುಕೊಂಡರೆ ಸಮಾಜದಲ್ಲಿ ಪ್ರತಿಷ್ಠೆ ಇರಲ್ಲ. ಬೇಗ ಇನ್ನೆರಡು ಫ್ಲೋರ್ ಕಟ್ಟಿಸು. ಇಲ್ಲಾಂದ್ರೆ ಯಾರೂ ನಿಮ್ಮ ಮನೆಗೆ ಬರಲ್ಲ" ಎಂದು ಹೇಳುತ್ತಿದ್ದರಂತೆ.

ಆ ಮಾತುಗಳು ಸ್ನೇಹಿತನ ಮನಸ್ಸಿನಲ್ಲಿ ಎಷ್ಟು ಆಳವಾಗಿ ಬೇರೂರಿದ್ದವೋ ಗೊತ್ತಿಲ್ಲ. ಆದರೆ ಕೊನೆಗೆ ಅಗತ್ಯಕ್ಕಿಂತ ಹೆಚ್ಚಿನ ಹಣದ ತೊಂದರೆ ಮಾಡಿಕೊಂಡರು. ಸಾಲ ಮಾಡಿಕೊಂಡರು. ಮಾನಸಿಕವಾಗಿ ಜರ್ಝರಿತರಾದರು. ಒಮ್ಮೆ ನನ್ನ ಬಳಿ ಕುಳಿತು ತಮ್ಮ ಕಷ್ಟ ಹೇಳಿಕೊಂಡಾಗ, "ನಿಮಗೆ ನಿಜವಾಗಿಯೂ ಈಗ ಇದರ ಅವಶ್ಯಕತೆ ಇದೆಯಾ?" ಎಂದು ಕೇಳಿದ್ದೆ. "ಇಲ್ಲ" ಎಂದರು. "ಹಾಗಾದರೆ ಯಾರೋ ಏನೋ ಅಂದುಕೊಳ್ಳುತ್ತಾರೆ ಅಂತ ಈ ವಯಸ್ಸಿನಲ್ಲಿ ಸಾಲ ಮಾಡಿಕೊಂಡು ಏಕೆ ಪರದಾಡಬೇಕು? ಇರೋ ಇಬ್ಬರಿಗೆ ಸುಖವಾಗಿ ಬದುಕಲು ಇಷ್ಟು ಸಾಕಲ್ಲವೇ?" ಎಂದು ಹೇಳಿದ್ದೆ. ಅವರು ಆಗ ಒಪ್ಪಿದಂತೆ ಕಂಡಿದ್ದರು. ನಂತರ ಏನಾಯಿತೋ ಗೊತ್ತಿಲ್ಲ. ಆದರೆ ಆ ಘಟನೆ ನನ್ನ ಮನಸ್ಸಿನಲ್ಲಿ ಉಳಿಯಿತು.

ಅಲ್ಲಿಂದಲೇ ಈ ಪ್ರಶ್ನೆ ಮತ್ತೆ ಮತ್ತೆ ನನ್ನನ್ನು ಕಾಡುತ್ತದೆ ನಾವು ನಿಜವಾಗಿಯೂ ನಮ್ಮ ಬದುಕನ್ನು ಬದುಕುತ್ತಿದ್ದೇವೆಯೇ? ಅಥವಾ ಬೇರೆಯವರು ನಮ್ಮ ಬಗ್ಗೆ ಏನು ಅಂದುಕೊಳ್ಳುತ್ತಾರೆ ಎಂಬುದನ್ನು ಗಮನಿಸುತ್ತಾ ಬದುಕುತ್ತಿದ್ದೇವೆಯೇ?

ನಮ್ಮಲ್ಲಿ ಒಂದು ವಿಚಿತ್ರವಾದ ವರ್ಗವಿದೆ. ಅವರಿಗೆ ತಮ್ಮ ಬದುಕಿಗಿಂತ ಬೇರೆಯವರು ತಮ್ಮ ಬಗ್ಗೆ ಏನು ಅಂದುಕೊಳ್ಳುತ್ತಾರೆ ಎಂಬುದೇ ದೊಡ್ಡ ಚಿಂತೆಯಾಗಿರುತ್ತದೆ. "ನನ್ನ ಮಗನ ಓಇಇಖ ಫಲಿತಾಂಶ ನಾಳೆ ಬರುತ್ತೆ. ಕಡಿಮೆ ಅಂಕ ಬಂದರೆ ಅಕ್ಕಪಕ್ಕದವರು ಕೇಳಿದಾಗ ಏನು ಹೇಳಲಿ?" "ನಾವಿನ್ನೂ ಮನೆ ಕಟ್ಟಿಲ್ಲ, ಕಾರು ತೆಗೆದುಕೊಂಡಿಲ್ಲ, ಮಕ್ಕಳ ಮದುವೆ ಮಾಡಿಲ್ಲ, ಹೊಸ ಒಡವೆ-ಸೀರೆ ತೆಗೆದುಕೊಂಡಿಲ್ಲ ಅಂತ ಅವರಿವರು ಕೇಳಿದರೆ ಏನು ಉತ್ತರ ಕೊಡಲಿ?" "ನನ್ನ ನೆಂಟರ ಮಕ್ಕಳಿಗೆ ಕೆಲಸ ಸಿಕ್ಕಿದೆ. ನನ್ನ ಮಕ್ಕಳಿಗೆ ಇನ್ನೂ ಉದ್ಯೋಗ ಸಿಕ್ಕಿಲ್ಲ. ಅವರ ಮುಂದೆ ಹೇಗೆ ಮುಖ ತೋ-ರಿಸಲಿ?" "ನನ್ನಮ್ಮ ಹೆಚ್ಚು ಓದಿಲ್ಲ, ಇಂಗ್ಲಿಷ್ ಬರುವುದಿಲ್ಲ. ಅವಳನ್ನು ನನ್ನ ಶಾಲೆಯ ಪೇರೆಂಟ್ಸ್ ಡೇಗೆ ಕರೆದುಕೊಂಡು ಹೋದರೆ ನನ್ನ ಸ್ನೇಹಿತರು ಏನೆಂದುಕೊಳ್ಳುತ್ತಾರೆ?" "ಎಲ್ಲರೂ ಸ್ಪೂನ್-ಫೋರ್ಕ್ ಬಳಸುತ್ತಿದ್ದಾರೆ. ನನಗೆ ಕೈಯಲ್ಲಿ ಊಟ ಮಾಡುವುದೇ ಇಷ್ಟ. ಆದ-ರೆ ಅವರಂತೆ ತೋರಿಕೆಗೆ ನಾನೂ ಹಾಗೆಯೇ ಮಾಡಬೇಕಲ್ಲವೇ?" "ನಮಗೆ ಇಷ್ಟವಾದ ಜಾಗದಲ್ಲಿ ಆಸ್ತಿ ತೆಗೆದುಕೊಳ್ಳೋಣ ಎಂದರೆ ಬಂಧುಗಳು ವಾಸ್ತು ಸರಿಯಿಲ್ಲ, ದಿಕ್ಕು ಸರಿಯಿಲ್ಲ ಎಂದು ಹೇಳುತ್ತಿದ್ದಾರೆ. ಅವರ ಮಾತಿನಿಂದ ಮುಂದೆ ಹೆಜ್ಜೆ ಇಡಲು ಆಗುತ್ತಿಲ್ಲ." ಇಂತಹ ನೂರಾರು ಪ್ರಶ್ನೆಗಳು ಕೆಲವರ ತಲೆಯೊಳಗೆ ದಿನವಿಡೀ ಸುತ್ತುತ್ತಿರುತ್ತವೆ. ತಮಾಷೆಯ ಸಂಗತಿಯೆಂದರೆ, ನಾವು ಯಾರ ಬಗ್ಗೆ ಇಷ್ಟೊಂದು ತಲೆಕೆಡಿಸಿಕೊಂಡಿರುತ್ತೇವೋ, ಅವರು ಬಹುಶಃ ನಮ್ಮ ಬಗ್ಗೆ ಅಷ್ಟೊಂದು ಯೋಚಿಸುತ್ತಲೇ ಇರುವುದಿಲ್ಲ! ನಾವು ರಾತ್ರಿ ನಿದ್ದೆ ಬಾರದಷ್ಟು ಚಿಂತಿಸುವ ವ್ಯಕ್ತಿ, ಬಹುಶಃ ಆ ದಿನ ರಾತ್ರಿ ನಮ್ಮ ಹೆಸರನ್ನೇ ನೆನಪಿಸಿಕೊಳ್ಳದೇ ಮಲಗಿರಬಹುದು. ನಾವು ಅವರ ಮಾತಿಗೆ ಇಷ್ಟೊಂದು ಮಹತ್ವ ಕೊಟ್ಟಿರುತ್ತೇವೆ; ಆದರೆ ಅವರ ಬದುಕಿನಲ್ಲಿ ನಾವು ಅಷ್ಟು ಮುಖ್ಯ ವ್ಯಕ್ತಿಗಳೇ ಆಗಿರುವುದಿಲ್ಲ.

ಹಾಗಿದ್ದರೂ "ಅವರು ಏನಂದುಕೊಂಡಾರು?" ಎಂಬ ಗುಮ್ಮನನ್ನು ನಾವೇ ನಮ್ಮ ತಲೆಯೊಳಗೆ ಕೂರಿಸಿಕೊಂಡು, ನಾವೇ ಭಯಪಡುತ್ತೇವೆ. ನಾವೇ ನಮ್ಮ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತೇವೆ. ನಾವೇ ನಮ್ಮ ಸಂತೋಷಕ್ಕೆ ಅಡ್ಡಿಯಾಗುತ್ತೇವೆ. ಕೆಲವೊಮ್ಮೆ ಒಣ ಪ್ರತಿಷ್ಠೆಗಾಗಿ ಸಾಲ ಮಾಡುತ್ತೇವೆ. ಮತ್ತೊಮ್ಮೆ ಯಾರನ್ನಾದರೂ ಮೆಚ್ಚಿಸಲು ನಮ್ಮಿಷ್ಟವಿಲ್ಲದ ಕೆಲಸ ಮಾಡುತ್ತೇವೆ. ಇನ್ನೊಮ್ಮೆ ಜನರ ಮಾತಿಗೆ ಹೆದರಿ ನಮಗೆ ಇಷ್ಟವಾದ ಅವಕಾಶವನ್ನೇ ಕೈಬಿಡುತ್ತೇವೆ.

**ಇದೆಲ್ಲಾ ಬೇಕಾ?**

ಆದರೆ ಇದರರ್ಥ ಬೇರೆಯವರ ಮಾತನ್ನೆಲ್ಲಾ ಕಿವಿಗೆ ಹಾಕಿಕೊಳ್ಳಬಾರದು ಎಂದಲ್ಲ. ನಮ್ಮನ್ನು ನಿಜವಾಗಿ ಪ್ರೀತಿಸುವವರು, ನಮ್ಮ ಒಳಿತನ್ನು ಬಯಸುವವರು, ನಮ್ಮ ತಪ್ಪನ್ನು ನೇರವಾಗಿ ಹೇಳುವ ಧೈರ್ಯವಿರುವವರು□ಅವರ ಮಾತಿಗೆ ಬೆಲೆ ಕೊಡಬೇಕು. ಏಕೆಂದರೆ ಕೆಲವೊಮ್ಮೆ ನಮಗೆ ಕಾಣದ ತಪ್ಪು ಅವರ ಕಣ್ಣಿಗೆ ಕಾಣಬಹುದು. ನನ್ನ ವಿಷಯದಲ್ಲಿಯೂ ಅದೇ. ಆ ಶಿಕ್ಷಕರು ನನ್ನ ಮೊಬೈಲ್ ಬಳಕೆಯ ಬಗ್ಗೆ ಹೇಳಿದ ಮಾತಿನಲ್ಲಿ ಕಾಳಜಿ ಇರಬಹುದು. ಮೊಬೈಲ್ ಬಳಕೆಗೆ ಮಿತಿ ಇರಬೇಕು ಎಂಬುದು ನಿಜ. ನಮಗೆ ಇಷ್ಟವಾದ ಯಾವುದೇ ವಿಷಯ ಅತಿಯಾದರೆ ಅದು ಸಮಸ್ಯೆಯಾಗಬಹುದು. ಹಾಗಾಗಿ ಅವರ ಮಾತನ್ನು ಸಂಪೂರ್ಣವಾಗಿ ತಳ್ಳಿಹಾಕುವುದು ಸರಿಯಲ್ಲ.

ಆದರೆ ಅದೇ ಕಾರಣಕ್ಕೆ ನನ್ನ ಬರವಣಿಗೆ, ಕಲಿಕೆ, ಮಾಹಿತಿ ಹುಡುಕುವ ಹವ್ಯಾಸವನ್ನೇ ಬಿಟ್ಟುಬಿಡುವುದೂ ಸರಿಯಲ್ಲ. ಹೀಗಾಗಿ ನಾನು ನನಗೇ ಹೇಳಿಕೊಂಡೆ□"ಸತ್ಯವಿದ್ದರೆ ಸ್ವೀಕರಿಸು. ತಪ್ಪಿದ್ದರೆ ತಿದ್ದಿಕೋ. ಆದರೆ ಪ್ರತಿಯೊಂದು ಮಾತನ್ನೂ ನಿನ್ನ ಬದುಕಿನ ತೀರ್ಪಾಗಿ ಸ್ವೀಕರಿಸಬೇಡ."

**ಬಹುಶಃ ಬದುಕಿನ ಸಮತೋಲನ ಇದೇ.**

ಬೇರೆಯವರ ಮಾತು ಕೇಳಬೇಕು; ಆದರೆ ನಮ್ಮ ಬದುಕಿನ ನಿರ್ಧಾರವನ್ನು ಸಂಪೂರ್ಣವಾಗಿ ಅವರ ಕೈಗೆ ಕೊಡಬಾರದು. ಟೀಕೆ ಬಂದಾಗ ಕೋಪಗೊಳ್ಳಬಾರದು; ಆದರೆ ಪ್ರತಿಯೊಂದು ಟೀಕೆಯ ಮುಂದೆ ತಲೆಬಾಗಲೂಬಾರದು. ಸಲಹೆ ಬಂದಾಗ ಸ್ವೀಕ-ರಿಸಬೇಕು; ಆದರೆ ಪ್ರತಿಯೊಂದು ಸಲಹೆಗೂ ಅನುಗುಣವಾಗಿ ನಮ್ಮ ವ್ಯಕ್ತಿತ್ವವನ್ನೇ ಬದಲಿಸಿಕೊಳ್ಳಬೇಕಿಲ್ಲ.

ಎಲ್ಲರನ್ನೂ ಮೆಚ್ಚಿಸಲು ಹೊರಟರೆ, ಕೊನೆಗೆ ನಮ್ಮೊಳಗೆ



ಉಳಿಯುವುದು ಯಾರು? ನಾವೇ ಇರಲಾರೆವು.

ಚಾಡಿಮಾತು, ಚುಚ್ಚುಮಾತು, ಅಸೂಯೆಯ ಮಾತು, ತೋರಿಕೆಯ ಒಣಮಾತು, ಕಾಲೆಳೆಯುವ ಮಾತು ಇವೆಲ್ಲ ಬದುಕಿನ ದಾರಿಯಲ್ಲಿ ಸಿಗುವ ಮುಳ್ಳುಗಳಿದ್ದಂತೆ. ಅವುಗಳನ್ನು ಜಾಣತನದಿಂದ ಪಕ್ಕಕ್ಕೆ ಸರಿಸಿ ಮುಂದೆ ಸಾಗಬೇಕು. ಆ ಮುಳ್ಳುಗಳನ್ನು ಕಿತ್ತುಕೊಂಡು ನಮ್ಮ ಜೇಬಿನಲ್ಲಿ ಇಟ್ಟುಕೊಂಡು, ಪ್ರತಿ ಹೆಜ್ಜೆಗೂ ನಮ್ಮನ್ನೇ ನಾವು ಚುಚ್ಚಿಕೊಳ್ಳುತ್ತಾ ಸಾಗುವುದೇಕೆ?

ನಮ್ಮ ಗುರಿ ಸರಿಯಾಗಿದ್ದರೆ, ಯೋಚನೆ ಸರಿಯಾಗಿದ್ದರೆ, ಪ್ರಯತ್ನ ಪ್ರಾಮಾಣಿಕವಾಗಿದ್ದರೆ ಫಲಿತಾಂಶಕ್ಕೆ ಸಮಯ ಬೇಕಾದರೂ ಬರುತ್ತದೆ. ಜೀವನದಲ್ಲಿ ಒಳ್ಳೆಯ ದಿನಗಳೂ ಬರುತ್ತವೆ, ಕೆಟ್ಟ ದಿನಗಳೂ ಬರುತ್ತವೆ. ಇದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಹಾಗಂತ ಕೈಕಟ್ಟಿ ಕುಳಿತುಕೊಳ್ಳಲೂ ಸಾಧ್ಯವಿಲ್ಲ. ನಮ್ಮ ದಾರಿಯಲ್ಲಿ ನಾವು ನಡೆಯಬೇಕು.

ಆದ್ದರಿಂದ ಒಂದು ಹಂತದಲ್ಲಿ ನಮಗೆ ನಾವೇ ಹೇಳಿಕೊಳ್ಳಬೇಕು"ನನ್ನ ಬದುಕು ನನ್ನದು."

ಇದು ಸ್ವಾರ್ಥದ ಘೋಷಣೆ ಅಲ್ಲ. ಇದು ಜವಾಬ್ದಾರಿಯ ಅರಿವು. ನನ್ನ ಸಂತೋಷದ ಹೊಣೆಗಾರಿಕೆ ನನ್ನದು. ನನ್ನ ಆಯ್ಕೆಗಳ ಹೊಣೆಗಾರಿಕೆ ನನ್ನದು. ನನ್ನ ತಪ್ಪುಗಳ ಹೊಣೆಗಾರಿಕೆಯೂ ನನ್ನದೇ.

ನಮ್ಮಿಷ್ಟದಂತೆ ಬದುಕುವುದು ಎಂದರೆ ಮನಬಂದಂತೆ ಬದುಕುವುದು ಅಲ್ಲ. ಜವಾಬ್ದಾರಿಯಿಂದ, ವಿವೇಕದಿಂದ, ಆತ್ಮವಿಶ್ವಾಸದಿಂದ, ನಮ್ಮ ಮಿತಿಗಳನ್ನು ಅರಿತುಕೊಂಡು ಬದುಕುವುದು. ನಮ್ಮ ಹವ್ಯಾಸ ನಮ್ಮನ್ನು ಬೆಳೆಸಬೇಕು; ನಮ್ಮ ಬದುಕನ್ನೇ ನಿಯಂತ್ರಿಸಬಾರದು. ನಮ್ಮ ಸಂಪತ್ತು ನಮ್ಮ ನೆಮ್ಮದಿಯನ್ನು ಕಸಿದುಕೊಳ್ಳಬಾರದು. ನಮ್ಮ ಪ್ರತಿಷ್ಠೆ ನಮ್ಮನ್ನು ಸಾಲದ ಸುಳಿಗೆ ತಳ್ಳಬಾರದು. ನಮ್ಮ ಸಂಬಂಧಗಳು ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದು. ಬೇರೆಯವರ ಅಭಿಪ್ರಾಯಗಳು ನಮ್ಮ ಆತ್ಮವಿಶ್ವಾಸವನ್ನು ನುಂಗಬಾರದು.

ಬೇರೆಯವರನ್ನು ಗೌರವಿಸುತ್ತಾ, ಅವರ ಮಾತಿನಿಂದ ಕಲಿಯುತ್ತಾ, ಅಗತ್ಯವಿದ್ದರೆ ನಮ್ಮನ್ನು ತಿದ್ದಿಕೊಳ್ಳುತ್ತಾ, ಆದರೆ ನಮ್ಮ ಬದುಕಿನ ಅರ್ಥವನ್ನು ಕಳೆದುಕೊಳ್ಳದೆ ಬದುಕುವುದು□ಬಹುಶಃ ಇದೇ ನಿಜವಾದ ಸ್ವಾತಂತ್ರ್ಯ.

ನಾವು ಯಾರ ಕಣ್ಣಿಗೆ ಹೇಗೆ ಕಾಣುತ್ತೇವೆ ಎಂಬುದು ಅವರ ದೃಷ್ಟಿಕೋನ. ನಮ್ಮ ಕಣ್ಣಿಗೆ ನಾವು ಹೇಗಿದ್ದೇವೆ ಎಂಬುದು ನಮ್ಮ ಆತ್ಮಪರಿಚಯ. ಆದರೆ ಆತ್ಮಪರಿಚಯದ ಹೆಸರಿನಲ್ಲಿ ನಮ್ಮ ತಪ್ಪನ್ನು ಸಮರ್ಥಿಸಿಕೊಳ್ಳಬಾರದು. ಅದೇ ರೀತಿ ಬೇರೆಯವರ ಅಭಿಪ್ರಾಯದ ಹೆಸರಿನಲ್ಲಿ ನಮ್ಮ ಅಸ್ತಿತ್ವವನ್ನೂ ಕಳೆದುಕೊಳ್ಳಬಾರದು.

"ಜನ ಏನು ಅಂದುಕೊಳ್ಳುತ್ತಾರೆ?" ಎಂಬ ಪ್ರಶ್ನೆ ನಮ್ಮ ಜೀವನವನ್ನು ನಿಯಂತ್ರಿಸುವ ಮಟ್ಟಕ್ಕೆ ಬಂದಾಗ, ಒಮ್ಮೆ ನಿಂತು ನಮ್ಮನ್ನೇ ನಾವು ಕೇಳಿಕೊಳ್ಳಬೇಕು"ನಾನು ನಿಜವಾಗಿಯೂ ಇದನ್ನು ನನ್ನ ಸಂತೋಷಕ್ಕಾಗಿ ಮಾಡುತ್ತಿದ್ದೇನೆಯಾ? ಅಥವಾ ಯಾರಾದರೂ ನನ್ನ ಬಗ್ಗೆ ಒಳ್ಳೆಯದಾಗಿ ಅಂದುಕೊಳ್ಳಲಿ ಎಂಬ ಕಾರಣಕ್ಕೆ ಮಾಡುತ್ತಿದ್ದೇನೆಯಾ?"

ಈ ಪ್ರಶ್ನೆಗೆ ಪ್ರಾಮಾಣಿಕ ಉತ್ತರ ಸಿಕ್ಕರೆ, ನಮ್ಮ ಬದುಕಿನ ಹಲವು ಗೊಂದಲಗಳು ಅಲ್ಲಿಯೇ ಪರಿಹಾರವಾಗಬಹುದು.

ಒಂದು ಸರಳ ಸತ್ಯವೆಣಟಿಜಜಜಿಟಿಜಜನೆಂದರೆ, ನಾವು ಎಲ್ಲರನ್ನೂ ಮೆಚ್ಚಿಸಲು ಸಾಧ್ಯವಿಲ್ಲ. ನೀವು ಎಷ್ಟೇ ಒಳ್ಳೆಯವರಾಗಿದ್ದರೂ ಯಾರಿಗಾದರೂ ನಿಮ್ಮಲ್ಲಿ ಒಂದು ಕೊರತೆ ಕಾಣುತ್ತದೆ. ನೀವು ಎಷ್ಟೇ ಪ್ರಾಮಾಣಿಕರಾಗಿದ್ದರೂ ಯಾರಿಗಾದರೂ ನಿಮ್ಮ ನಡೆ ಇಷ್ಟವಾಗುವುದಿಲ್ಲ. ನೀವು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಅದನ್ನು ಟೀಕಿಸುವ ಒಬ್ಬರು ಇದ್ದೇ ಇರುತ್ತಾರೆ.

ಹಾಗಾಗಿ ಪ್ರತಿಯೊಬ್ಬರ ಅಭಿಪ್ರಾಯಕ್ಕೆ ತಕ್ಕಂತೆ ನಮ್ಮನ್ನು ಬದಲಿಸಿಕೊಳ್ಳುತ್ತಾ ಹೋದರೆ, ಒಂದು ದಿನ ನಮ್ಮದೇ ಮುಖ ನಮಗೆ ಅಪರಿಚಿತವಾಗಿ ಕಾಣಬಹುದು. ಬೇರೆಯವರ ಮಾತು ಕೇಳೋಣ. ಒಳ್ಳೆಯ ಮಾತಿಗೆ ಕೃತಜ್ಞರಾಗೋಣ. ಸತ್ಯವಿದ್ದರೆ ಸ್ವೀಕ-ರಿಸೋಣ. ತಪ್ಪಿದ್ದರೆ ತಿದ್ದಿಕೊಳ್ಳೋಣ. ಆದರೆ ನಮ್ಮ ಬದುಕಿನ ಸ್ಟೀ-ರಿಂಗ್‌ನ್ನು ಮಾತ್ರ ಬೇರೆಯವರ ಕೈಗೆ ಕೊಡದಿರೋಣ.

ಕೆಲವೊಮ್ಮೆ ಸಾಲ ಮಾಡಿಯಾದರೂ ತುಪ್ಪ ತಿನ್ನುವ ಆಸೆ ಬದುಕಿಗೆ ಒಳ್ಳೆಯದಲ್ಲ. ಹಾಗೆಯೇ ಮತ್ತೊಬ್ಬರ ಬಿಟ್ಟಿ ಕಾಮೆಂಟ್‌ಗಳಿಗೆ ಮೆಂಟಲ್ ಆಗುವ ತುರಿಕೆಯೂ ನೆಮ್ಮದಿಗೆ ಒಳ್ಳೆಯದಲ್ಲ.

ನಮ್ಮ ಬದುಕು ನಮಗೆ ಇಷ್ಟವಾಗುವಂತಿರಬೇಕು. ಆದರೆ ಅದು ನಮ್ಮ ಜವಾಬ್ದಾರಿಗಳನ್ನೂ ಗೌರವಿಸುವಂತಿರಬೇಕು. ನಮ್ಮ ಸಂತೋಷ ನಮಗಿರಬೇಕು. ಆದರೆ ಅದಕ್ಕಾಗಿ ಮತ್ತೊಬ್ಬರ ಬದುಕಿಗೆ ತೊಂದರೆ ಕೊಡಬಾರದು. ನಮ್ಮಿಷ್ಟದಂತೆ ನಡೆಯಬೇಕು. ಆದರೆ ನಮ್ಮ ತಪ್ಪನ್ನು ಒಪ್ಪಿಕೊಳ್ಳುವಷ್ಟು ಪ್ರಾಮಾಣಿಕತೆಯೂ ಇರಬೇಕು.

ಕೊನೆಗೆ ನನಗೆ ಅನಿಸಿದ್ದು ಒಂದೇ□

ನಾನು ಬೇರೆಯವರು ಬಯಸಿದಂತೆ ಬದುಕಬೇಕಾಗಿಲ್ಲ, ಆದರೆ ಅವರನ್ನು ಗೌರವಿಸಬೇಕು. ಅವರ ಮಾತನ್ನು ಕೇಳಬೇಕು.



ಸತ್ಯವಿದ್ದರೆ ಸ್ವೀಕರಿಸಬೇಕು. ತಪ್ಪಿದ್ದರೆ ತಿದ್ದಿಕೊಳ್ಳಬೇಕು. ಆದರೆ ಕೇವಲ ಮತ್ತೊಬ್ಬರ ಮೆಚ್ಚುಗೆಗಾಗಿ ನನ್ನ ಬದುಕನ್ನು ಬದಲಿಸಿಕೊಳ್ಳಬಾರದು.

**ಏಕೆಂದರೆ..**
**ಬದುಕು ನಮ್ಮದು.**
**ದಾರಿ ನಮ್ಮದು.**
**ಆಯ್ಕೆ ನಮ್ಮದು.**

ಆದರೆ ಪ್ರತಿಯೊಂದು ಆಯ್ಕೆಯ ಜವಾಬ್ದಾರಿಯೂ ನಮ್ಮದೇ.

ಹಾಗಾಗಿ ಬೇರೆಯವರ ಕಣ್ಣಿಗೆ ನಾವು ಹೇಗೆ ಕಾಣುತ್ತೇವೆ ಎನ್ನುವುದಕ್ಕಿಂತ, ನಮ್ಮ ಅಂತರಂಗದ ಕಣ್ಣಿಗೆ ನಾವು ಹೇಗಿದ್ದೇವೆ ಎಂಬುದನ್ನು ನೋಡೋಣ.

ಯಾಕೆಂದರೆ ಕೊನೆಗೆ ನಮ್ಮೊಂದಿಗೆ ಉಳಿಯುವವರು ಎಲ್ಲರೂ ಅಲ್ಲ... ನಾವೇ.

ಆದ್ದರಿಂದ ನಮ್ಮ ಬದುಕಿನ ನಿರ್ಧಾರವನ್ನು ನಮ್ಮ ಕೈಯಲ್ಲೇ ಇಟ್ಟುಕೊಳ್ಳೋಣ. ಯಾರ ಮಾತಿನಿಂದಲೂ ನಮ್ಮ ನೆಮ್ಮದಿಯನ್ನು ಕಳೆದುಕೊಳ್ಳದಿರೋಣ.

**ನಿಮ್ಮ ಬದುಕು...**
**ನಿಮ್ಮಿಷ್ಟ...**
**ಅಷ್ಟೇ..!**

## ಭಾರತೀಯ ವಿಜ್ಞಾನ ತಂತ್ರಜ್ಞಾನ ಮಹೋತ್ಸವಕ್ಕೆ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ರಾಷ್ಟ್ರ ಮಟ್ಟದ ಆರನೆಯ ಭಾರತೀಯ ವಿಜ್ಞಾನ ತಂತ್ರಜ್ಞಾನ ಮಹೋತ್ಸವ ಬಿಎಸ್ ಟಿ ಎಫ್ 2026 ಕ್ಕೆ ತಾಲೂಕಿನ ನಾದ ಕೆಡಿ ಗ್ರಾಮದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಹಾಗೂ ಶಿಕ್ಷಕಿ ಗುಜರಾತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಸೈನ್ಸ ಆಂಡ್ ಟೆಕ್ನಾಲಾಜಿ ಫೌಂಡೇಷನ್ ನ್ಯಾಸನಲ್ ಕೌನ್ಸಿಲ್ ಆಫ್ ಯಂಗ ಸೈಂಟಿಸ್ಟ ಮಹಾ ಉತ್ಸವ ಆಯೋಜಿಸಲ್ಪಟ್ಟಿತ್ತು ಗುಜರಾತಿನ ಅಂಕಲೇಶ್ವರದಲ್ಲಿ ಅಕ್ಟೋಬರ 24 ಮತ್ತು 25 ರಂದು ನಡೆದಿದೆ. ರಾಷ್ಟ್ರ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಸೋಲಾರ್ ಎನರ್ಜಿ ಹಾಗೂ ರೋಬೋಟ್ ವಿಜ್ಞಾನ ಮಾದರಿಯನ್ನು 10 ನೇ ತರಗತಿಯ ವಿದ್ಯಾರ್ಥಿ ಮಲ್ಲಿಕಾರ್ಜುನ ಒಡೆಯರ ಪ್ರಸ್ತುತ ಪಡಿಸಿದ್ದಾನೆ.

ಜೊತೆಗೆ ಶಿಕ್ಷಕರ ವಿಭಾಗದಲ್ಲಿ ಫ್ಯೂಚರ್ ಕ್ಲಾಸ್ ರೂಮ ಎ ಐ ಚಾಲೆಂಜ್ 2026 ಎಂಬ ರಾಷ್ಟ್ರ ಮಟ್ಟದದ ಪಿಪಿಟಿ ಪ್ರಸ್ತುತ ಸ್ಪರ್ಧೆಯಲ್ಲಿ ಗಣಿತ ವಿಷಯದ ಶಿಕ್ಷಕಿಯಾದ ಶ್ರೀಮತಿ ರೇಣುಕಾ ನಾಗಠಾಣ ಭಾಗವಹಿಸಿದ್ದಾರೆ. ರಾಷ್ಟ್ರ ಮಟ್ಟದ ವಿಜ್ಞಾನ ತಂತ್ರಜ್ಞಾನ ಮೇಳದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗೆ ಹಾಗೂ ಶಿಕ್ಷಕಿ ನಾಗಠಾಣ ರವರಿಗೆ ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷ ಬಸವರಾಜ ಅಂಕದ, ಮುಖ್ಯ ಗುರುಗಳಾದ ಸಿ.ಎಂ ಬಂಡಗರ ಶಿಕ್ಷಕರು ಗ್ರಾಮಸ್ಥರು ಅಭಿನಂದಿಸಿದ್ದಾರೆ.

## ದೇವರಹಿಪ್ಪರಗಿ ಜಾತ್ರೆ: ಸಕ್ಕರೆಲೋಭಾನ–ಅನ್ನ ಸಂತರ್ಪಣೆ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಶ್ರೀ ರಾವುತರಾಯ ಮಲ್ಲಯ್ಯ ಜಾತ್ರಾ ಅಂಗವಾಗಿ ಜರುಗಿದ ಸಕ್ಕರೆ ಲೋಬಾನ ಹಾಗೂ ಅನ್ನ ಸಂತರ್ಪಣೆಯಲ್ಲಿ ಭಕ್ತರು ಪಾಲ್ಗೊಂಡು ಸಂತೃಪ್ತರಾದರು.

ಪಟ್ಟಣದ ಜಾತ್ರೆಯ ಅಂಗವಾಗಿ ಸಂಪ್ರದಾಯದಂತೆ ನಡೆದುಕೊಂಡು ಬಂದ "ಸಕ್ಕರೆ ಲೋಬಾನ" ಗ್ರಾಮ್ಯಭಾಷೆಯಲ್ಲಿನ 'ಸಕ್ರಿಲಾಭಾನ' ಕಾರ್ಯಕ್ರಮದಲ್ಲಿ ಸೋಮವಾರ ಸಾವಿರಾರು ಭಕ್ತರು ಪಾಲ್ಗೊಂಡರು. ಬೆಳಿಗ್ಗೆಯಿಂದ ಸಾರ್ವಜನಿಕರು ಸರದಿಯಲ್ಲಿ ನಿಂತು ಇರ್ವರು ದೇವರ ದರ್ಶನ ಪಡೆದರು. ಇನ್ನೂ ಈ ಬಾರಿ ಆಡಳಿತ ಮಂಡಳಿ ಶೀಘ್ರದರ್ಶನ ವ್ಯವಸ್ಥೆ ಕಲ್ಪಿಸಿದ್ದು ಅಗತ್ಯ ಭಕ್ತರಿಗೆ ಅನುಕೂಲವಾಯಿತು.

ಜಾತ್ರಾ ಮಹೋತ್ಸವಕ್ಕೆ ದೇವಸ್ಥಾನ ಸಮಿತಿ ಹಿಂದೆಂದಿಗಿಂತಲೂ ಈ ಬಾರಿ ಹೆಚ್ಚು ಅನುಕೂಲ ಹಾಗೂ ಸೌಲಭ್ಯಗಳನ್ನು ಕಲ್ಪಿಸಿದ್ದು ಭಕ್ತರು ಸರಳ ದರ್ಶನಕ್ಕೆ ಸಹಕಾರಿಯಾಯಿತು. ಇನ್ನೂ ಪಟ್ಟಣದ ವಿವಿಧ ಗೆಳೆಯರ ಬಳಗದ ತಂಡಗಳು ಹಾಗೂ ಸಂಘ ಸಂಸ್ಥೆಗಳು ಹಿಂದಿನಂತೆ ಉಪಹಾರ ಸಹಿತ ಅನ್ನ ಸಂತರ್ಪಣೆಯನ್ನು ಯಶಸ್ವಿಯಾಗಿ ಕೈಗೊಂಡು ಭಕ್ತರ ಮನ ತಣಿಸಿದವು.

ಸಾಂಪ್ರದಾಯಿಕ ವಗ್ಗ್ಯೆಗಳಿಗೆ ಪ್ರಸಾದ ವಿತರಣೆ ಸೇರಿದಂತೆ ಭಕ್ತರ ದೀರ್ಘದಂಡ ನಮಸ್ಕಾರ ಸಹಿತ ವಿವಿಧ ಹರಿಕೆಗಳು ದೇವಸ್ಥಾನದ ಆವರಣದಲ್ಲಿ ಸಾಮಾನ್ಯವಾಗಿದ್ದವು. ಜಾತ್ರೆ ಸಹಿತ ಜನದಟ್ಟಣೆಯಲ್ಲಿ ಯಾವುದೇ ಅಹಿತಕರ




ಘಟನೆಗಳು ಜರುಗದಂತೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ನಿಗಾ ವಹಿಸಿ ತನ್ನ ಕರ್ತವ್ಯ ನಿಭಾಯಿಸಿತು.

ಈ ಬಾರಿ ಮಳೆಯ ಅಭಾವ ಹಾಗೂ ಬರದ ಕಾರಣ ಜಾತ್ರೆಯಲ್ಲಿ ಕಳೆದ ವರ್ಷಕ್ಕಿಂತ ಜನದಟ್ಟಣೆ ಕಡಿಮೆಯಾದಂತೆ ತೋರಿತಾದರೂ, ದೇವಸ್ಥಾನ ಆಡಳಿತ ಮಂಡಳಿ ಕೈಗೊಂಡ ಬದಲಾವಣೆಗಳು ಹಾಗೂ ಪೊಲೀಸ್ ಇಲಾಖೆಯ ಕ್ರಮಗಳಿಂದಾಗಿ ಭಕ್ತರು ನಿರಾಳವಾಗಿ, ಶಾಂತರೀತಿಯಿಂದ ದರ್ಶನ ಭಾಗ್ಯ ಪಡೆದಂತೂ ಸತ್ಯ.

# 'ಚನ್ನಪ್ಪ ಕಟ್ಟಿ ಕಥಾ ಪ್ರಶಸ್ತಿ' ಗೆ ಕಥಾ ಸಂಕಲನಗಳ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನೆಲೆ ಪ್ರಕಾಶನ ಸಂಸ್ಥೆ ಅಡಿಯಲ್ಲಿ ಸ್ಥಾಪಿಸಲಾಗಿರುವ "ಚನ್ನಪ್ಪ ಕಟ್ಟಿ ಪ್ರತಿಷ್ಠಾನ"ದಿಂದ ಈ ವರ್ಷದ 'ಚನ್ನಪ್ಪ ಕಟ್ಟಿ ಕಥಾ ಪ್ರಶಸ್ತಿ'ಗೆ 2026ನೆಯ ಸಾಲಿನಲ್ಲಿ ಪ್ರಕಟಗೊಂಡ ಕಥಾ ಪ್ರಕಾರದ ಪ್ರಶಸ್ತಿ ನೀಡಲು ನಿರ್ಧರಿಸಿದ್ದು, ಕತೆಗಾರರಿಂದ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

ಆಯ್ಕೆಯಾದ ಕೃತಿಗೆ ಹನ್ನೊಂದು ಸಾವಿರ ರೂಪಾಯಿಮೊತ್ತ,ಪ್ರಶಸ್ತಿಫಲಕನೀಡಿಗೌರವಿಸಲಾಗುತ್ತದೆ. ಪ್ರಕಟಿತ ಮೂರು ಪ್ರತಿಗಳನ್ನು ದಿನಾಂಕ 20 ನವೆಂಬರ್ 2026 ರೊಳಗೆ ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕು.

ನೆಲೆ ಪ್ರಕಾಶನ ಸಂಸ್ಥೆ
ಸಿಂದಗಿ

ಡಾ. ಎಂ ಎಂ ಪಡಶೆಟ್ಟಿ ಸಂಚಾಲಕರು,
"ಚನ್ನಪ್ಪ ಕಟ್ಟಿ ಪ್ರತಿಷ್ಠಾನ"
ಗುರುಬಸವ ವಿದ್ಯಾನಗರ,
ವಾಟರ್ ಟ್ಯಾಂಕ್ ಹತ್ತಿರ
ಸಿಂದಗಿ –586128 ದೂ: 9620007518
ವಿಜಯಪುರ ಜಿಲ್ಲೆ.

# ವಿಜಯಪುರ ನಗರ ಅಂತಿಮ ಮತದಾರರ ಪಟ್ಟಿ ಪ್ರಕಟ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ 2026ರ ಅಂಗವಾಗಿ 30ಬಿಜಾಪುರ ನಗರ ವಿಧಾನಸಭಾ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯನ್ನು ಅ. 27ರಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಕ್ಷೇತ್ರದಲ್ಲಿ ಒಟ್ಟು 2,13,068 ಮತದಾರರಿದ್ದು ಈ ಪೈಕಿ 1,04,158 ಪುರುಷ, 1,08,869 ಮಹಿಳೆಯರು 41 ಇತರೆ ಮತದಾರರಿದ್ದಾರೆ ಎಂದು ಬಿಜಾಪುರ ನಗರ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳಾದ ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.ಅಂತಿಮ ಮತ ದಾರರ ಪಟ್ಟಿಯನ್ನು ವಿಜಯಪುರ ಮಹಾನಗರ ಪಾಲಿಕೆಯ ಕಾರ್ಯಾಲಯದ ಸೂಚನಾ ಫಲಕದಲ್ಲಿಯೂ ಪ್ರಕಟಿಸಲಾಗಿದ್ದು, ಚುನಾವಣಾ ಆಯೋಗದ ಅಧಿಕೃತ ವೆಬ್¸ÉÊmï https://voters.eci.gov.in ಮೂಲಕವೂ ಹಾಗೂ ತಮ್ಮ ಭಾಗದ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಮತ್ತು ಪಾಲಿಕೆ ಚುನಾವಣಾ ಶಾಖೆಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಾಪ್ರತಿಭೋತ್ಸವ: ನ.5ವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳ ಹಾಗೂ ಯುವಜನರಲ್ಲಿನ ಕಲಾಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿರುವ ಕಲಾಪ್ರತಿಭೋತ್ಸವದಲ್ಲಿ ಭಾಗವಹಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಬಾಲಪ್ರತಿಭೆ, ಕಿಶೋರ ಪ್ರತಿಭೆ ಹಾಗೂ ಯುವಪ್ರತಿಭೆ ವಿಭಾಗಗಳಲ್ಲಿ ಭಾಗವಹಿಸಲು ಅಗತ್ಯ ದಾಖಲೆಗಳೊಂದಿಗೆ ನ.5ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ಇಲ್ಲಿಗೆ ಖುದ್ದಾಗಿ ಸಲ್ಲಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಣೆ ತಿಳಿಸಿದೆ.

# ರೈತ–ರೈತ ಮಹಿಳೆ ಪ್ರಶಸ್ತಿಗೆ ಅರ್ಜಿ ನ.9ರವರೆಗೆ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ 2026–27ನೇ ಸಾಲಿನ ತೋಟಗಾ–ರಿಕೆ ಮೇಳವನ್ನು ಡಿಸೆಂಬರ್.23ರಿಂದ 25ರವರೆಗೆ ಹವಾಮಾನವೈಪರೀತ್ಯದಲ್ಲಿಸ್ಥಿರತೋಟಗಾರಿಕೆಎಂಬ ಧ್ಯೇಯವಾಕ್ಯದೊಂದಿಗೆ ಆಯೋಜಿಸಲಾಗುತ್ತಿದೆ. ಈ ಮೇಳದ ಅಂಗವಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಯ ರಾಜ್ಯದ ಪ್ರತಿ ಜಿಲ್ಲೆಯಿಂದ ತಲಾ ಒಬ್ಬರಂತೆ ಶ್ರೇಷ್ಠ ತೋಟಗಾರಿಕೆ ರೈತ ಹಾಗೂ ಶ್ರೇಷ್ಠ ತೋಟಗಾ–ರಿಕೆ ರೈತ ಮಹಿಳೆಯ ಆಯ್ಕೆಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ನ.9ರವರೆಗೆ ವಿಸ್ತರಿಸಲಾಗಿದೆ.

ಅರ್ಜಿ ನಮೂನೆಯನ್ನು ಜಿಲ್ಲೆಯ ತಿಡಗುಂದಿಯ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ನೇರವಾಗಿ ಪಡೆಯಬಹುದು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.uhsbagalkot.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಯನ್ನು ಮುಖ್ಯಸ್ಥರು, ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ತಿಡಗುಂದಿ 586119, ವಿಜಯಪುರ ಜಿಲ್ಲೆ, ಈ ವಿಳಾಸಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9448418501 ಸಂಪರ್ಕಿಸಬಹುದಾಗಿದೆ ಎಂದು ಕೇಂದ್ರದ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಮಕ್ಕಳ ಹಕ್ಕುಗಳ ರಕ್ಷಣೆ– ಸುರಕ್ಷಿತ ಬಾಲ್ಯಕ್ಕೆ ಆದ್ಯತೆ ನೀಡಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳ ಹಕ್ಕುಗಳ ರಕ್ಷಣೆ, ಬಾಲ್ಯವಿವಾಹ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸುವ ಮೂಲಕ ಅವರ ಸಮಗ್ರ ಬೆಳವಣಿಗೆಗೆ ಆದ್ಯತೆ ನೀಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹರೀಶ್ ಎ. ಹೇಳಿದರು.

ನಗರದ ವಿವೇಕನಗರದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಪ್ರೌಢಶಾಲೆಯಲ್ಲಿ ಅ.27ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಿಕ್ಷಣ ಇಲಾಖೆ ಹಾಗೂ ಶಾಲೆಯ ಸಹಯೋಗದಲ್ಲಿ ಆಯೋಜಿಸಿದ್ದ ಸುರಕ್ಷಿತ ಬಾಲ್ಯ ಅಭಿಯಾನ ನನ್ನ ಬಾಲ್ಯ– ನನ್ನ ಹಕ್ಕು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದುವುದರ ಜೊತೆಗೆ ವೈಯಕ್ತಿಕ ಸುರಕ್ಷತೆ ಮತ್ತು ಸಾಮಾಜಿಕ ಸುರಕ್ಷತೆಯ ಬಗ್ಗೆಯೂ ಜಾಗೃತರಾಗಿರಬೇಕು. ಸೈಬರ್ ಸುರಕ್ಷತೆ, ಆನ್‌ಲೈನ್ ವಂಚನೆ, ಮಕ್ಕಳ ಆರೋಗ್ಯ ಮತ್ತು ಮಾನಸಿಕ ಸ್ಥಿತಿ, ಪರೀಕ್ಷೆಯ ಭಯ, ಒತ್ತಡ ನಿರ್ವಹಣೆ, ಸ್ವಚ್ಛತೆ, ಆರೋಗ್ಯ ಹಾಗೂ ರಸ್ತೆ ಸುರಕ್ಷತೆಯ ಕು–ರಿತು ಮಕ್ಕಳಿಗೆ ಸೂಕ್ತ ಅರಿವು ಮೂಡಿಸುವುದು ಅಗತ್ಯವಾಗಿದೆ. ಯಾವುದೇ ರೀತಿಯ ಸಮಸ್ಯೆ ಎದುರಾದಾಗ ಭಯಪಡದೆ ಸಂಬಂಧಪಟ್ಟವರ ಗಮನಕ್ಕೆ ತರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಎಸ್. ಹಾಗರಗಿ ಮಾತನಾಡಿ, ಮಕ್ಕಳ ಹಕ್ಕುಗಳ ರಕ್ಷಣೆಯ ಮಹತ್ವವನ್ನು ವಿವರಿಸಿದರು.

ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಡಿ.ಜಿ. ಬಿರಾದಾರ, ಶಾಲೆಯ ಸಲಹಾ ಸಮಿತಿಯ ಅಧ್ಯಕ್ಷ ಹಾಗೂ ವಕೀಲ ಅಶೋಕ್ ಮಲಗಾಣ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಸುಜಾತಾ ಹಿರೇಮಠ ಮತ್ತು ಪ್ರೇಮಾವತಿ ಹಿರೇಮಠ ಸೇರಿದಂತೆ ಶಾಲೆಯ ಮುಖ್ಯಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕೃಷಿಕರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಒಂದು ಲಕ್ಷ ಎತ್ತಿನ ಬಂಡಿಗಳ ಸಮ್ಮುಖದಲ್ಲಿ ರಸ್ತೆತಡೆ । ನಂದಿ ಸೇನೆ ಪ್ರಮುಖ ಬಸವರಾಜ ಬಿರಾದಾರ ಹೇಳಿಕೆ

# ನ.5 ರಂದು ಹೆದ್ದಾರಿ ಬಂದ್ ಗೆ ನಂದಿ ಸೇನೆ ಯೋಚನೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜೋಡೆತ್ತಿನ ಕೃಷಿಗೆ ಪ್ರಥಮಾದ್ಯತೆ ನೀಡುವುದು, ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು 11 ಸಾವಿರ ರೂ. ಪ್ರೋತ್ಸಾಹ ಧನ ನೀಡುವುದು ಸೇರಿದಂತೆ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದಲ್ಲಿ ಕಳೆದ ಹಲವಾರು ವರ್ಷಗಳಿಂದ ಅಭಿಯಾನ ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರ ಮನ್ನಣೆ ಇನ್ನೂ ನೀಡಿಲ್ಲ. ಇನ್ನೂ ಸ್ಪಂದನೆ ಮಾಡದೇ ಹೋದರೆ ಒಂದು ಲಕ್ಷ ಎತ್ತಿನ ಬಂಡಿಗಳ ಸಮ್ಮುಖದಲ್ಲಿ ನವ್ಹೆಂಬರ್ 5 ರಂದು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ರಸ್ತೆ ತಡೆ ನಡೆಸುವುದು ಸೂಕ್ತ ಎಂದು ನಂದಿ ಸೇನೆ ಪ್ರಮುಖ ಬಸವರಾಜ ಬಿರಾದಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ತಾಲೂಕಾ ಮಟ್ಟದಲ್ಲಿ ಬೃಹತ್ ಹೋರಾಟದ ಮೂಲಕ ಎತ್ತಿನ ಬಂಡಿಗಳ ಸಮ್ಮುಖದಲ್ಲಿ ರಸ್ತೆ ತಡೆ ನಡೆಸಲಾಗಿದೆ,ಆದರೆ ಇನ್ನೂ ಸರ್ಕಾರ ಎಚ್ಚೆತ್ತುಕೊಳ್ಳದೇ ಹೋದರೆ ಹೋರಾಟ ತೀವ್ರ ಸ್ವರೂಪ ಪಡೆಯಲಿದ್ದು, ನ.5 ರಂದು ಒಂದು ಲಕ್ಷ ಎತ್ತಿನ ಬಂಡಿಗಳ ಮೂಲಕ ರಾಷ್ಟ್ರೀಯ ಹೆದ್ದಾರಿ ತಡೆಯುವ ಮೂಲಕ ಹೋರಾಟ ನಡೆಸುವುದು ನಿಶ್ಚಿತ ಎಂದರು.

ಸತತ 3 ವರ್ಷಗಳಿಂದ ಜೋಡೆತ್ತಿನ ಕೃಷಿಕರ ನಂದಿ ಸೇನೆಯ ಬೇಡಿಕೆಗೆ ಸರ್ಕಾರ ಯಾವುದೇ ರೀತಿಯ ಸ್ಪಂದನೆ ನೀಡದಿರುವ ಕಾರಣ ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಚಿಕ್ಕಲಕಿ ಹತ್ತಿರ ಹೆದ್ದಾ–ರಿಯನ್ನು ಇದೇ ದಿ.30 ರಿಂದ ರಿಂದ ನಿರಂತರವಾಗಿ ನೂರಾರು ಎತ್ತಿನ ಬಂಡಿಗಳಿಂದ ತಡೆಯಲಾಗುವುದು, ಇದಕ್ಕೂ ಸರ್ಕಾರ ಸ್ಪಂದಿಸದೇ ಹೋದರೆ ನ.5 ರಂದು ಒಂದು ಲಕ್ಷ ಎತ್ತಿನ ಬಂಡಿಗಳಿಂದ ರಾಜ್ಯದ ಹೆದ್ದಾ–ರಿಗಳನ್ನು ತಡೆಯುವುದು ನಿಶ್ಚಿತ ಎಂದರು.

ಕಳೆದ 20 ವರ್ಷಗಳಲ್ಲಿ ಶೇ.80 ರಷ್ಟು ಜೋಡೆತ್ತು ಕೃಷಿ ಪದ್ಧತಿ ನಾಶವಾಗಿರುವುದರಿಂದ ಮಣ್ಣಿನ ಫಲವತ್ತತೆ ಎಲ್ಲ ಬೆಳೆಗಳ ಕೃಷಿ ಸಂಸ್ಕೃತಿ ನಾಶವಾಗುತ್ತಿದೆ. ಈ ಸಂದರ್ಭದಲ್ಲಿ, ರೈತರ ನಿಜವಾದ ಆಸ್ತಿಯಾದ ಎತ್ತುಗಳ ಶಕ್ತಿಯಿಂದ ನಿರ್ಮಾಣವಾದ ಬಯಲು ಸೀಮೆಯ ಗ್ರಾಮಗಳು ಎತ್ತುಗಳ ಶಕ್ತಿಯಿಂದ ಮಾತ್ರ ಉಳಿಯಲು ಸಾಧ್ಯವೆಂದು ಅರಿವು ಮೂಡಿಸಿದ ಜ್ಞಾನಯೋಗಿ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರೇರಣೆಯಿಂದ ನಂದಿ ಕೃಷಿ ಸಂಸ್ಕೃತಿ ಪುನಶ್ಚೇತನಕ್ಕಾಗಿ ನಂದಿ ಕೂಗು ಅಭಿಯಾನ ಹಾಗೂ ನಂದಿ ಸೇನೆ ಸಂಘಟನೆ ಪ್ರಾರಂಭಿಸಿ ರಾಜ್ಯಾದ್ಯಂತ ಎತ್ತಿನ ಕೃಷಿಯ ಮಹತ್ವದ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದರು.ನಂದಿ ಕೃಷಿ ಸಂಸ್ಕೃತಿ ಪುನಶ್ಚೇತನಕ್ಕಾಗಿ ರಾಜ್ಯದ ಶೇ.10 ಪ್ರತಿಶತ ಬಜೆಟ್ ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು ರೂ. 11 ಸಾವಿರ ರೂ ಪ್ರೋತ್ಸಾಹ ಧನ ನೀಡುವ ಯೋಜನೆ ರೂಪಿಸುವುದು, ನಂದಿ ವಿದ್ಯುತ್, ಗ್ಯಾಸ್, ಅಡುಗೆ ಎಣ್ಣೆ, ಗೊಬ್ಬರ, ಔಷಧಿಗಳು ಹಾಗೂ ಆಹಾರ ತಯಾರಿಸುವುದಕ್ಕೆ ಪ್ರೋತ್ಸಾಹ ನೀಡುವ ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

### ವಿಶೇಷ ಅಧಿವೇಶನ ಕರೆಯಿರಿ

ನಂದಿ ಸೇನೆ ಬೇಡಿಕೆಯು ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಶ್ರೀಗಳು ತೋರಿದ ದಾರಿಯಾಗಿದೆ. ಇದಕ್ಕಿಂತಲೂ ಉತ್ತಮವಾದ ಪರ್ಯಾಯ ದಾರಿಯನ್ನು ಸರ್ಕಾರ ಜಗತ್ತಿನ ಯಾವುದಾದರೂ ಕೃಷಿ ವಿಶ್ವವಿದ್ಯಾಲಯದ ಮೂಲಕ ತಿಳಿಸಿದರೆ, ಹೆದ್ದಾರಿ ತಡೆಯನ್ನು ಆ ಕ್ಷಣದಿಂದ ಹಿಂಪಡೆಯಲಾಗುವುದು ಎಂದರು.

ಇಲ್ಲವಾದರೆ, ಮುಖ್ಯಮಂತ್ರಿಗಳು ಕೂಡಲೇ ವಿಶೇಷ ಅಧಿವೇಶನ ಕರೆದು ರಾಜ್ಯದ ಜೋಡೆತ್ತಿನ ಕೃಷಿಕರ ಬೇಡಿಕೆಯನ್ನು ಈಡೇರಿಸಿ ರಾಜ್ಯವನ್ನು ನಿಜವಾದ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಬೇಕು ಎಂದು ನಂದಿ ಸೇನೆಯ ಬಸವರಾಜ ಹೇಳಿದರು.

## ಭಾರತೀಯ ಜನತಾ ಪಕ್ಷದ ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಪ್ರತಿಕ್ರಿಯೆ

# ಪ್ರಧಾನಿ ಮೋದಿ ಬಗ್ಗೆ ಖರ್ಗೆ ಪದ ಪ್ರಯೋಗ ಸರಿಯಲ್ಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಗ್ಯಾರಂಟಿ ಯೋಜನೆಗಳಿಗಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಬಾಂದವ–ರಿಗಾಗಿ ಮೀಸಲಿರಿಸಿದ ವಿಶೇಷಾನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಡೈವರ್ಟ್ ಮಾಡಿದಾಗ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಅಬ್ಬರಿಸಿ ಸರ್ಕಾರವನ್ನು ಏಕೆ ತರಾಟೆಗೆ ತೆಗೆದುಕೊಳ್ಳಲಿಲ್ಲ, ಆಗ ಮೌನವಾಗಿ ಈಗ ಪ್ರಧಾನಿ ಅವರ ಮೇಲೆ ವಿನಾಕಾರಣ ಶೋಭೆ ಬಾರದ ರೀತಿಯಲ್ಲಿ ಪದ ಪ್ರಯೋಗಿಸಿ ಟೀಕಿಸಿರುವುದು ಎಷ್ಟು ಸರಿ? ಎಂದು ಭಾರತೀಯ ಜನತಾ ಪಕ್ಷದ ಎಸ್.ಸಿ. ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಪ್ರಶ್ನಿಸಿದ್ದಾರೆ.

ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯ ರಾಜಕಾರಣಿ, ಅವರ ಬಗ್ಗೆ ನಮಗೆ ಗೌರವವಿದೆ, ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಖರ್ಗೆ ಅವರ ಮೇಲೆ ಅಷ್ಟೇ ಅಭಿಮಾನ, ಗೌರವ ಇರಿಸಿಕೊಂಡಿದ್ದಾರೆ. ಅಂತಹ ವ್ಯಕ್ತಿಯನ್ನು ಟೀಕಿಸಿರುವುದು ಸರಿಯಲ್ಲ. ಈ ಅಬ್ಬರದ ಮಾತು ದಲಿತ ಬಾಂಧವ–ರಿಗೆ ಅನ್ಯಾಯವಾದಾಗ ಏಕೆ ಬರಲಿಲ್ಲ ಎಂಬುದು ನನ್ನ ಸಹಜ ಪ್ರಶ್ನೆ. ಅದೇ ತೆರನಾಗಿ ಮೀಸಲಾತಿ ಹೆಚ್ಚಳ ವಿಷಯವಾಗಿ ರಾಜ್ಯ ಸರ್ಕಾರ ಸಮರ್ಥವಾದ ಕಾನೂನಾತ್ಮಕ ಹೋರಾಟ ಕೈಗೊಳ್ಳಲು ವಿಫಲವಾಗಿ ಮೀಸಲಾತಿ ವಿಷಯ ಹಿನ್ನಡೆಯಾದ ಸಂದರ್ಭದಲ್ಲಿ ಸರ್ಕಾರದ ನಡೆಯನ್ನು ಏಕೆ ಈ ಖಾರವಾದ ಮಾತಿನಿಂದ ಪ್ರಶ್ನಿಸಲಿಲ್ಲ.

ಪರಿಶಿಷ್ಟಪಂಗಡಬಾಂಧವರಶ್ರೇಯೋಭಿವೃದ್ಧಿಗಾಗಿ ಬಳಕೆಯಾಗಬೇಕಾದ ಮಹರ್ಷಿ ವಾಲ್ಮೀಕಿ ನಿಗಮದ ಹಣವನ್ನು ಚುನಾವಣೆ ಉದ್ದೇಶಕ್ಕೆ ವಾಮ ಮಾರ್ಗಕ್ಕೆ ಬಳಕೆ ಮಾಡಿದಾಗಲೂ ನೀವು ಧ್ವನಿ ಎತ್ತಲಿಲ್ಲ. ಇಷ್ಟೆಲ್ಲ ಅನ್ಯಾಯವಾದರೂ ಸಹ ನೀವು ಗಟ್ಟಿಯಾದ ಧ್ವನಿ ಎತ್ತಲಿಲ್ಲ ಎಂಬ ಬೇಜಾರು ಪ್ರತಿಯೊಬ್ಬ ದಲಿತ ಬಾಂಧವರಲ್ಲಿದೆ ಎಂದು ಕಾರಜೋಳ ಹೇಳಿದ್ದಾರೆ.

ಇನ್ನೂ ದಲಿತ ಬಾಂಧವರ ಬಗ್ಗೆ ಕಾಂಗ್ರೆಸ್ ಮೊದಲಿನಿಂದಲೂ ನಿರ್ಲಕ್ಷ್ಯ ನೀತಿ ಅನುಸರಿಸುತ್ತಲೇ ಇದೆ, ದೇಶಕ್ಕೆ ಮಹೋನ್ನತ ಸಂವಿಧಾನ ನೀಡಿದ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಸಮಾಧಿ ಸ್ಥಳಕ್ಕೆ ನವದೆಹಲಿಯಲ್ಲಿ ಜಾಗ ನೀಡಲಿಲ್ಲ, ಅವರ ವಿರುದ್ಧ ಚುನಾವಣೆಯಲ್ಲಿ ಅಭ್ಯರ್ಥಿ ನಿಲ್ಲಿಸಿ ಅವರು ಚುನಾವಣೆಯಲ್ಲಿ ಪರಾಜಯ ಅನುಭವಿಸುವಂತೆ ಮಾಡಿದ್ದು ಸಹ ಕಾಂಗ್ರೆಸ್, ಈ ವಿಷಯವಾಗಿಯೂ ಖರ್ಗೆ ಸಾಹೇಬರು ಒಂದು ದಿನವೂ ಮಾತನಾಡಿಲ್ಲ.

ಯಾರನ್ನೋ ಮೆಚ್ಚಿಸಲು ಉನ್ನತ ವ್ಯಕ್ತಿತ್ವದ ಪ್ರಧಾನಿ ಅವರ ಬಗ್ಗೆ ಅಗೌರವ ತೋರುವ ಮಾತು ಆಡಿರುವುದು ಎಷ್ಟು ಸರಿ? ಈ ಕಾಂಗ್ರೆಸ್ ಪಕ್ಷದವರು ನಿಮಗೆ ಮುಖ್ಯಮಂತ್ರಿ ಸಹ ಮಾಡಲಿಲ್ಲ, ಇನ್ನೂ ದೇಶದ ಪ್ರಧಾನಿ ಅವರನ್ನು ಟೀಕಿಸಿದರೆ ನಿಮ್ಮನ್ನು ಪ್ರಧಾನಿಯಾಗಿಸುತ್ತಾರೆ ಎಂಬುದು ನಿಮ್ಮ ಭ್ರಮೆ, ಕಾಂಗ್ರೆಸ್ ಯಾವತ್ತೂ ಅಧಿಕಾರಕ್ಕೆ ಬರುವುದಿಲ್ಲ, ನಿಮ್ಮ ಕನಸು ಯಾವತ್ತೂ ನನಸಾಗುವುದಿಲ್ಲ, ಹೀಗಾಗಿ ಈ ಭ್ರಮೆಲೋಕದಿಂದ ಹೊರಬನ್ನಿ, ಯಾರನ್ನೋ ಮೆಚ್ಚಿಸಲು ಪ್ರಧಾನಿ ಅವರ ವಿರುದ್ಧದ ಹೇಳಿಕೆ ನೀಡಬೇಡಿ ಎಂದು ಹೇಳಲು ಬಯಸುತ್ತೇನೆ ಎಂದು ಕಾರಜೋಳ ಹೇಳಿದ್ದಾರೆ.

# ಮಕ್ಕಳಲ್ಲಿ ಸಂಸ್ಕೃತಿ–ಸಂಸ್ಕಾರ ಬೆಳೆಸುವುದು ತಾಯಂದಿರ ಹೊಣೆ :ಅಮೃತಾ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಸಂಸ್ಕೃತಿ, ಸಂಸ್ಕಾರ, ಭಕ್ತಿ ಹಾಗೂ ಗುರುಹಿರಿಯರಿಗೆ ಗೌರವ ನೀಡುವ ಮೌಲ್ಯಗಳನ್ನು ಒಳಗೊಂಡಿರುವುದು ಹಿಂದೂ ಸನಾತನ ಧರ್ಮ ಎಂದು ಮಹಿಳಾ ಮುಖಂಡೆ ಅಮೃತಾ ರಾ. ಕಾಪಸೆ ಹೇಳಿದರು.

ಝುಳಕಿಯ ಜೈ ಅಂಬಾ ಭವಾನಿ ನವ ತರುಣ ಮಂಡಳಿಯ ವತಿಯಿಂದ ಆಯೋಜಿಸಿದ್ದ ಶ್ರೀ ರೇಣುಕಾ ಯಲ್ಲಮ್ಮನ ಮಹಾತ್ಮೆ ಎಂಬ ಭಕ್ತಿಪ್ರಧಾನ ನಾಟಕದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೂ ಸನಾತನ ಧರ್ಮದಲ್ಲಿ ಭಕ್ತಿಗೆ ವಿಶೇಷ ಸ್ಥಾನವಿದೆ. ದಾರಿಯಲ್ಲಿ ಕಾಣುವ ಕಲ್ಲಿಗೂ ಬಣ್ಣ, ಸುಣ್ಣ ಹಚ್ಚಿ ದೇವರೆಂದು ಭಾವಿಸಿ ಪೂಜಿಸುವ ಭಕ್ತಿಭಾವ ನಮ್ಮ ಧಾರ್ಮಿಕ ಸಂಸ್ಕೃತಿಯ ಭಾಗವಾಗಿದೆ. ಗುರುಹಿ–ರಿಯರನ್ನು ಗೌರವದಿಂದ ಕಾಣುವುದು, ಭಕ್ತಿಯಿಂದ ನಡೆದುಕೊಳ್ಳುವುದು ಹಾಗೂ ನವರಾತ್ರಿಯ ಒಂಬತ್ತು ದಿನಗಳ ಕಾಲ ಮಹಿಳೆಯರು ನಾಡದೇವಿಗೆ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸುವುದು ನಮ್ಮ ಧಾರ್ಮಿಕ ಪರಂಪರೆಯ ಮಹತ್ವವನ್ನು ಸಾರುತ್ತದೆ ಎಂದು ಹೇಳಿದರು.

ಮಹಿಳಾ ಮುಖಂಡೆ ಅಶ್ವಿನಿ ಪ. ಪಾಟೀಲ ಮಾತನಾಡಿದರು.

ಶ್ರೀಮತಿ ಮಹಾನಂದಾ ಹಿರೇಮಠ ಸಾನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಮಹಾನಂದ ಸ. ಹಿರೇಮಠ, ಸುನೀತಾ ಪಾ. ಜಹಾಗೀರದಾರ, ಸ್ನೇಹಾ ಶ. ಪಾಟೀಲ, ಸುಷ್ಮಾ ವಿ. ಶಿರಶ್ಯಾಡ, ಶೀಲಾ ಸು. ಹೂಗಾರ, ಲಲತಾ ಕೋಳಿ, ರಾಜೇಶ್ವರಿ ರಾ. ತೇಲಿ, ಮಲ್ಲಮ್ಮ ಸ. ಚಿತ್ರಗಾರ, ಮಲ್ಲಮ್ಮ ಗ. ಮಡಿವಾಳ, ಮಹಾನಂದಾ ಅ. ಬಿರಾದಾರ, ಜ್ಯೋತಿ ಸ. ಡೋಳಿ, ಕುಮಾರಿ ವೈಷ್ಣವಿ ಹೂಗಾರ, ಐಶ್ವರ್ಯ ಬಿರಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಅನಿತಾ ರಾ. ವಾಘಮೋರೆ ಕಾರ್ಯಕ್ರಮ ನಿರೂಪಿಸಿದರು.

## ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ-2026 ಅಂತಿಮ ಮತದಾರರ ಪಟ್ಟಿ ಪ್ರಕಟ । ಜಿಲ್ಲಾಧಿಕಾರಿ ಡಾ. ಆನಂದ ಕೆ ಮಾಹಿತಿ

# ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ 17,08,099 ಮತದಾರರು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿಯನ್ನು ಅ.27ರಂದು ಪ್ರಕಟಿಸಲಾಗಿದ್ದು, ಜಿಲ್ಲೆಯಲ್ಲಿ 8,69,149 ಪುರುಷರು, 8,38,768 ಮಹಿಳೆಯರು ಹಾಗೂ 182 ಇತರೆ ಸೇರಿದಂತೆ ಒಟ್ಟು 17,08,099 ಮತದಾರರಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಅವರು ತಿಳಿಸಿದ್ದಾರೆ.

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ–2026 ಪ್ರಕ್ರಿಯೆಯಡಿ ಆಗಸ್ಟ್ 24ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಕರಡು ಪಟ್ಟಿ ಪ್ರಕಟಿಸಿದ ನಂತರ ಆಗಸ್ಟ್ 24ರಿಂದ ಅಕ್ಟೋಬರ್ 22ರವರೆಗೆ ಸಾರ್ವಜನಿಕರಿಂದ ಸ್ವೀಕರಿಸಲಾದ ಹಕ್ಕು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಗತ್ಯ ಕ್ರಮಗಳನ್ನು ಕೈಗೊಂಡ ಬಳಿಕ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಕ್ಷೇತ್ರವಾರು ಮತದಾರರ ವಿವರ: ಅಂತಿಮ ಮತದಾರರ ಪಟ್ಟಿಯನ್ವಯ 26–ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದಲ್ಲಿ 98,548 ಪುರುಷರು, 96,713 ಮಹಿಳೆಯರು ಹಾಗೂ 25 ಇತರೆ ಮತದಾರರು ಸೇರಿದಂತೆ ಒಟ್ಟು 1,95,286 ಮತದಾರರಿದ್ದಾರೆ. 27–ದೇವರಹಿಪ್ಪರಗಿಕ್ಷೇತ್ರದಲ್ಲಿ 1,04,005 ಪುರುಷರು, 98,626 ಮಹಿಳೆಯರು ಹಾಗೂ 27 ಇತರೆ ಮತದಾರರು ಸೇರಿದಂತೆ ಒಟ್ಟು 2,02,658 ಮತದಾರರಿದ್ದಾರೆ. 28–ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ 1,00,822 ಪುರುಷರು, 98,842 ಮಹಿಳೆಯರು ಹಾಗೂ 21 ಇತರೆ ಮತದಾರರು ಸೇರಿದಂತೆ ಒಟ್ಟು 1,99,685 ಮತದಾರರಿದ್ದಾರೆ.

29–ಬಬಲೇಶ್ವರ ವಿಧಾನಸಭಾ ಮತಕ್ಷೇತ್ರದಲ್ಲಿ 1,03,812 ಪುರುಷರು, 1,00,131 ಮಹಿಳೆಯರು ಹಾಗೂ 9 ಇತರೆ ಮತದಾರರು ಸೇರಿದಂತೆ ಒಟ್ಟು 2,03,952 ಮತದಾರರಿದ್ದಾರೆ. 30–ಬಿಜಾಪುರ ನಗರ ಕ್ಷೇತ್ರದಲ್ಲಿ 1,04,158 ಪುರುಷರು, 1,08,869 ಮಹಿಳೆಯರು ಹಾಗೂ 41 ಇತರೆ ಮತದಾರರು ಸೇರಿದಂತೆ ಒಟ್ಟು 2,13,068 ಮತದಾರರಿದ್ದಾರೆ. 31–ನಾಗಠಾಣ ಮತಕ್ಷೇತ್ರದಲ್ಲಿ 1,24,682 ಪುರುಷರು, 1,17,855 ಮಹಿಳೆಯರು ಹಾಗೂ 12 ಇತರೆ ಮತದಾರರು ಸೇರಿದಂತೆ ಒಟ್ಟು 2,42,549 ಮತದಾರ–ರಿದ್ದಾರೆ.32–ಇಂಡಿ ವಿಧಾನಸಭಾ ಮತಕ್ಷೇತ್ರದಲ್ಲಿ 1,19,019 ಪುರುಷರು, 1,10,438 ಮಹಿಳೆಯರು ಹಾಗೂ 22 ಇತರೆ ಮತದಾರರು ಸೇರಿದಂತೆ ಒಟ್ಟು 2,29,479 ಮತದಾರರಿದ್ದಾರೆ. 33–ಸಿಂದಗಿ ಮತಕ್ಷೇತ್ರದಲ್ಲಿ 1,14,103 ಪುರುಷರು, 1,07,294 ಮಹಿಳೆಯರು ಹಾಗೂ 25 ಇತರೆ ಮತದಾರರು ಸೇರಿದಂತೆ ಒಟ್ಟು 2,21,422 ಮತದಾರರಿದ್ದಾರೆ. ಈ ಮೂಲಕ ಜಿಲ್ಲೆಯ ಎಂಟು ವಿಧಾನಸಭಾ ಮತಕ್ಷೇತ್ರಗಳಲ್ಲಿ ಒಟ್ಟು 17,08,099 ಮತದಾರರಿದ್ದಾರೆ.



ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನೋಂದಾಯಿತ ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಅಂತಿಮ ಮತದಾರರ ಭಾವಚಿತ್ರ ಸಹಿತ ಹಾರ್ಡ್ ಪ್ರತಿ ಹಾಗೂ ಭಾವಚಿತ್ರ ರಹಿತ ಸಾಫ್ಟ್ ಪ್ರತಿಗಳನ್ನು ವಿತರಿಸಲಾಗಿದೆ.

ಸಾರ್ವಜನಿಕರು ಚುನಾವಣಾ ಆಯೋಗದ ಅಧಿಕೃತ ಜಾಲತಾಣ voters.eci.gov.in ಚುನಾವಣಾ ಆಯೋಗದ ECINETಅಪ್ಲಿಕೇಶನ್ ಮೂಲಕ ಹಾಗೂ ಜಿಲ್ಲೆಯ ವೆಬ್ ಪೋರ್ಟಲ್ https://vijayapura.nic.in/en ಮೂಲಕ ಅಂತಿಮ ಮತದಾರರ ಪಟ್ಟಿಯನ್ನು ವೀಕ್ಷಿಸಬಹುದಾಗಿದೆ. ಚುನಾವಣಾ ಆಯೋಗದ ನಿಯಮದಂತೆ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ನಿರಂತರವಾಗಿ ನಡೆಯುವುದ–ರಿಂದ, ಅರ್ಹ ನಾಗರಿಕರು ತಮ್ಮ ಹೆಸರು ಸೇರ್ಪಡೆ ಹಾಗೂ ಅಗತ್ಯ ತಿದ್ದುಪಡಿಗಳಿಗಾಗಿ ನಿಯಮಾನುಸಾರ ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಚುನಾವಣಾ ಆಯೋಗದ ಅಧಿಕೃತ ಮತದಾರರ ಸೇವಾ ಪೋರ್ಟಲ್ ತಠಣಜಢಿ.ಜಛಿ.ರಠತ.ಟಿ ಚುನಾವಣಾ ಆಯೋಗದ ಇಅಖಿಓಇಖಿ ಅಪ್ಲಿಕೇಶನ್ ಮೂಲಕ, ಮತಗಟ್ಟೆ ಮಟ್ಟದ ಅಧಿಕಾರಿ, ಸಹಾಯಕ ಮತದಾರರ ನೋಂದಣಾಧಿಕಾರಿ–ಮತದಾರರ ನೋಂದಣಾಧಿಕಾರಿಗಳ ಕಚೇರಿ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR